ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 48
೨೮ ಸೆಪ್ಟಂಬರ್ ೧೯೫೮
★
ಪುಟ ೧೦ ಬೆಲೆ: ೧೩ ನಯೇ ಪೈಸೆ

★

ಭೂ-ಸುಧಾರಣಾ ಕಾಯಿದೆ ತರಲು ಮೈಸೂರು ಕಾಂಗ್ರೆಸ್ಸಿನ ಗೊಂದಲ

ರಾಜ್ಯದಲ್ಲಿ ಭೂಸುಧಾರಣಾ ಕಾಯಿದೆ ಪ್ರಶ್ನೆ ಬಹುದಿನದಿಂದ ಕಾದು ಕುಳಿತಿದೆ. ನೂತನ ರಾಜ್ಯಸ್ಥಾಪನೆಯಾಗಿ ಎರಡು ವರುಷಗಳಾಗುತ್ತ ಬಂದರೂ, ಮೈಸೂರು ಕಾಂಗ್ರೆಸ್ ನಾಯಕರಿಗೆ ಮತ್ತು ಸರಕಾರಕ್ಕೆ ಇನ್ನೂ ನಿರ್ಧಾರಕ್ಕೆ ಬರುವುದು ಕಷ್ಟವಾಗಿದೆ.

ರಾಜ್ಯದಲ್ಲಿ ಭೂಸುಧಾರಣಾ ಕಾಯಿದೆ ರಚಿಸಲು ಸೂಕ್ತವಾದ ಶಿಫಾರಸುಗಳನ್ನು ಮಾಡಲು ನೇಮಿಸಿದ್ದ ಜತ್ತಿ ಸಮಿತಿಯು ತನ್ನ ಶಿಫಾರಸುಗಳನ್ನು ಇತ್ತು ತಿಂಗಳುಗಳುರುಳಿದುವು. ವರದಿಯು ಸುದೀರ್ಘವಾಗಿ ವಿಧಾನ ಸಭೆಯಲ್ಲೂ ಸಹ ಚರ್ಚೆಯಾಯಿತು.

ಇಂದು ವರದಿಕರ್ತ ಜತ್ತಿಯವರೇ ಮುಖ್ಯ ಮಂತ್ರಿಯಾಗಿ ಆರು ತಿಂಗಳಾಗುತ್ತಾ ಬಂತು. ಆದರೂ ಇನ್ನೂ ಸಹ ಭೂಸುಧಾರಣಾ ಕಾಯಿದೆ ತರುವ ಪ್ರಶ್ನೆ ಇನ್ನೂ ಸಹ ಹೊಯ್ದಾಡುತ್ತಿದೆ.

ಕಳೆದ ವಾರ ಎರಡು ದಿನಗಳು ಪ್ರದೇಶ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಜತ್ತಿ ಸಮಿತಿಯ ವರದಿಯನ್ನೂ ಮತ್ತು ಅದರ ಪರ ಹಾಗೂ ವಿರೋಧವಾಗಿ ಬಂದಿದ್ದ ಮನವಿಗಳನ್ನು ಸಹ ಪರಿಶೀಲಿಸಿದೆ. ಚರ್ಚೆಯಲ್ಲಿ ಸಾಮಾನ್ಯವಾದ ಬೆಂಬಲ ಜತ್ತಿ ಸಮಿತಿಯ ಶಿಫಾರಸುಗಳಿಗೆ ಇದೆಯೆಂದು ಪತ್ರಿಕೆಗಳಿಗೆ ಇತ್ತಿರುವ ಹೇಳಿಕೆಯಲ್ಲಿ ತಿಳಿಸಲಾಗಿದೆ. ಆದರ ನಿಜಸ್ಥಿತಿ ಇದರಿಂದ ದೂರವಾಗಿದೆ ಎನ್ನಬಹುದು. ತೀವ್ರವಾದ ಭಿನ್ನಾಭಿಪ್ರಾಯಗಳು ಇವೆ ಎಂದು ತಿಳಿದುಬಂದಿದೆ.

ಯಾವ ವಿಧವಾದ ಸುಧಾರಣೆಯನ್ನು ವಿರೋಧಿಸುತ್ತ ಬಂದಿರುವ ಪ್ರಮುಖ ತಂಡವೊಂದಿದೆ. ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಮತ್ತು ಪ್ಲಾನಿಂಗ್ ಕಮಿಷನ್ನಿನ ಆದೇಶದ ಮೇಲೆ ಭೂಸುಧಾರಣಾ ಕಾಯಿದೆ ತರುವುದು ಅನಿವಾರ್ಯವಾಗಿದೆ. ಆದರೂ ಸಹ ಮೈಸೂರು ಕಾಂಗ್ರೆಸ್ ನಾಯಕರುಗಳು ಮತ್ತು ಸರಕಾರ ಆದಷ್ಟು ಕಾಲ ನೂಕಲು ನೋಡುತ್ತಿದೆ. ಈ ಕಾರ್ಯದಲ್ಲಿ ಅದು ಸಾಕಷ್ಟು ಮುಂದುವರಿದ ರಾಜ್ಯ ಎಂದು ಹೇಳಬಹುದು. ಪ್ರದೇಶ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿ ಒಮ್ಮತದ ಅಭಿಪ್ರಾಯಕ್ಕೆ ಬರಲು ಸಾಧ್ಯವಾಗದ್ದರಿಂದಾಗಿ ಈ ಎಂ. ಪಿ. ಸಿ. ಸಿ. ವಿಶೇಷ ಅಧಿವೇಶನವನ್ನು ಕರೆಯಲಾಗಿದೆ.

ಅಕ್ಟೋಬರ್ 14 ರಿಂದ 16ರವರೆಗೆ ಪ್ರದೇಶ ಕಾಂಗ್ರೆಸ್‌ನ ವಿಶೇಷ ಅಧಿವೇಶನವು ಬೆಂಗಳೂರಿನಲ್ಲಿ ನಡೆಯಲಿದೆ. ಈ ಅಧಿವೇಶನದಲ್ಲಿ ಭೂಸುಧಾರಣಾ ಪ್ರಶ್ನೆಯನ್ನು ಇತ್ಯರ್ಥ ಮಾಡುವುದೆಂದು ತಿಳಿದು ಬಂದಿದೆ. ಪ್ರದೇಶ ಕಾಂಗ್ರೆಸ್ ಸಮಿತಿ ಮತ್ತು ಶಾಸನಾಸಭಾ ಪಕ್ಷದ ಜಂಟಿ ಸಭೆಯನ್ನು ಸಧ್ಯಕ್ಕೆ ಕೈಬಿಡಲಾಗಿದೆ. ಅವಶ್ಯಬಿದ್ದಲ್ಲಿ ಅಂಥ ಸಭೆಯನ್ನು ಸೇರಿಸಲಾಗುವುದೆಂದು ತಿಳಿಸಲಾಗಿದೆ. ಚರ್ಚೆಯಾದ ನಂತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ವೀರಣ್ಣಗೌಡರು ಮತ್ತು ರೆವಿನ್ಯೂ ಸಚಿವ ಕಡಿದಾಳ್ ಮಂಜಪ್ಪನವರು ದೆಹಲಿಗೆ ಪ್ರಯಾಣ ಬೆಳೆಸಿ ಹೈಕಮಾಂಡಿನೊಂದಿಗೆ ಚರ್ಚೆನಡೆಸಿ ನಂತರ ಮಸೂದೆಯನ್ನು ತರಲಾಗುವುದು.

ಇಷ್ಟೆಲ್ಲಾ ಅವಾಂತರದ ಚರ್ಚೆ ನಡೆ ನಡೆಯುತ್ತಿರುವಾಗ ಬರಲಿರುವ ಸುಧಾರಣೆಯು ಎಷ್ಟು ಮಟ್ಟಿಗೆ ಪ್ರಗತಿಯುತವಾಗಿರುತ್ತದೆಂದು ಊಹಿಸಿಕೊಳ್ಳಬಹುದು. ಅಕ್ಟೋಬರ್ ಅಂತ್ಯದಲ್ಲಿ ಸೇರಲಿರುವ ಶಾಸನಾಸಭಾಧಿವೇಶನದ ಮುಂದೆ ಮಸೂದೆ ಬರಲಿದೆಯೇ ಎಂಬುದೇ ಈಗ ಸಂದೇಹಾಸ್ಪದವಾಗಿದೆ.

ಭ್ರಷ್ಟತೆ ತುಂಬಿದ ಬಂಗಾಳ ಸರ್ಕಾರ

ಬಂಗಾಲ ಸರಕಾರದ ಸೆಕ್ರೆಟರಿಗಳು, ಐ.ಸಿ.ಎಸ್. ಅಧಿಕಾರಿಗಳು, ಪೋಲೀಸ್ ಅಧಿಕಾರಿಗಳು, ವೈದ್ಯಕೀಯ ಶಾಖೆಯ ಉನ್ನತ ಅಧಿಕಾರಿಗಳು ಇನ್ನು ಹಲವರು ಸೇರಿಕೊಂಡು ಸುಮಾರು ವರುಷಗಳಿಂದ ದುಷ್ಟವ್ಯವಹಾರಗಳಲ್ಲಿ ತೊಡಗಿ ದೊಡ್ಡದೊಂದು ಕಳ್ಳಸಾಗಾಣಿಕೆಯ ಪಡೆಯನ್ನೇ ಕಟ್ಟಿಕೊಂಡು ಬಂಗಾಲ ಸರಕಾರದಲ್ಲಿ ತುಂಬಿರುವ ಭ್ರಷ್ಟಾಚಾರಗಳು ಬೆಳಕಿಗೆ ಬರಲು ಕಾರಣರಾಗಿದ್ದಾರೆ.

ಪಶ್ಚಿಮ ಬಂಗಾಲದ ಲಂಚ ನಿರೋಧ ಶಾಖೆಯ ವಿಶೇಷಾಧಿಕಾರಿಗಳಾಗಿರುವ ಡಾ|| ನಬಗೋಪಾಲ್‌ದಾಸ್ ಐ. ಸಿ. ಎಸ್. ಅವರು ನಡೆಸಿದ ತನಿಖೆಯ ಪರಿಣಾಮವಾಗಿ ಬೆಳಕಿಗೆ ಬಂದ ಈ ಅಕ್ರಮ ವ್ಯವಹಾರಗಳಲ್ಲಿ ಸರಕಾರದ ಕೆಲವು ಉನ್ನತ ಅಧಿಕಾರಿಗಳು ಕಾಂಗ್ರೆಸ್ಸಿನ ಒಬ್ಬ ಮಾಜೀ ಎಂ. ಪಿ. ಹಾಗೂ ಎಂ. ಎಲ್. ಎ., ಇವರುಗಳಿರುವುದು ಕಂಡುಬಂದಿದೆ.

ಈ ವಿಚಾರಣೆಯ ವರದಿ ಬಂಗಾಲ ಸರ್ಕಾರದ ಸಚಿವರೊಬ್ಬರಾಗಿರುವ ತರುಣ ಕಾಂತಿ ಘೋಷ್ ಅವರ ಒಡೆತನದಲ್ಲಿರುವ 'ಜುಗಾಂತರ' ದಿನ ಪತ್ರಿಕೆ ಪ್ರಕಟಿಸಿದೆ. ಬಂಗಾಲದಲ್ಲಿ ಭಾರೀ ಕೋಲಾಹಲವೆನ್ನಲು ಈ ಸುದ್ದಿಯೂ ಇದೀಗ ಒಂದು ಕಾರಣವಾಗಿದೆ.

ಈ ಭ್ರಷ್ಟಾಚಾರಗಳ ನಾಟಕದ ಪ್ರಮುಖ ನಾಯಕರು ಸಿಬ್ಬಪೂರಿನ ಬೋಟಾನಿಕ್ ಗಾರ್ಡನ್ಸ್‌ನ ಒಬ್ಬ ವರಿಷ್ಠಾಧಿಕಾರಿಗಳೆಂದು ಈ ವರದಿ ಹೇಳಿದೆ. ಇವರೊಂದಿಗೆ ಇರುವ ಸಹಪಾತ್ರಧಾರಿಗಳು ಪಶ್ಚಿಮ ಬಂಗಾಲ ಸರ್ಕಾರದ ಒಬ್ಬ ಜಂಟಿ ಕಾರ್ಯದರ್ಶಿಗಳು, ಜಿಲ್ಲಾ ಮ್ಯಾಜೀಸ್ಟ್ರೇಟರ ಹುದ್ದೆಯಲ್ಲಿರುವ ಇಬ್ಬರು ಐ. ಸಿ. ಎಸ್. ಅಧಿಕಾರಿಗಳು, ಮೂವರು ಪೋಲೀಸ್ ಅಧಿಕಾರಿಗಳು (ಇವರಲ್ಲೊಬ್ಬರು ಇತ್ತೀಚಿನವರೆಗೂ ಆಗಿದ್ದ ಡೆಪ್ಯುಟಿ ಕಮೀಷನರ್, ಕಲಕತ್ತಾ ಪೋಲೀಸ್ ಅವರು, ವೈದ್ಯಕೀಯ ಶಾಖೆಯ ಹಿರಿಯ ಅಧಿಕಾರಿಗಳೊಬ್ಬರು, ಮಾಜೀ ಕಾಂಗ್ರೆಸ್ ಎಂ. ಪಿ. ಮತ್ತು ಎಂ.ಎಲ್.ಎ. ಅಲ್ಲದೆ ಕೆಲವು ಕಿರಿಯ ಅಧಿಕಾರಿಗಳು ಇರುವರು.

ಹೇಯ ಕ್ರಮಗಳು

ಕಳ್ಳಸಾಗಾಣಿಕೆ ಹಾಗೂ ಇನ್ನಿತರ ಅಕ್ರಮ ವ್ಯವಹಾರಗಳನ್ನು ನಡೆಸಲು ಇವರು ಅನುಸರಿಸಿದ ರೀತಿ ಎಂಥದು? ಅಂದರೆ ಅತ್ಯಂತ ವಂಚಿತವಾದುದೇ. ನಿರಾಶ್ರಿತರ ಹುಡುಗೆಯರನ್ನು ಒಳ್ಳೆಯ ಉಡುಗೆತೊಡುಗೆಗಳಲ್ಲಿ ಶೃಂಗರಿಸಿ ಒಳ್ಳೆಯ ಮನೆಗಳಲ್ಲಿಟ್ಟು ಉನ್ನತಾಧಿಕಾರಿಗಳಿಗೆ ಒದಗಿಸಲು ಅವಕಾಶ ಕಲ್ಪಿಸಿಕೊಡುವುದು. ಪ್ರತಿಯಾಗಿ ಇವರು ಒದಗಿಸಿದವರ ಬೇಡಿಕೆಗಳನ್ನೆಲ್ಲ ಒದಗಿಸುತ್ತಿದ್ದರು.

ಅಡ್ಡದಾರಿ ಹಿಡಿದ ಇವರ ನಡವಳಿಕೆಯ ಪರಿಣಾಮಗಳೆಂದರೆ ಆದ ಆಜ್ಞೆಗಳನ್ನು ರದ್ದುಪಡಿಸುವುದು, ಪರ್ಮಿಟ್ಟುಗಳನ್ನು ದಯಪಾಲಿಸುವುನು, ರೈಲ್ವೆಗಳನ್ನು ದೋಚುವವರಿಗೆ, ಕಳ್ಳ ವ್ಯಾಪಾರಿಗಳಿಗೆ, ಅಪರಾಧಿಗಳಿಗೆ ಆಶ್ರಯ ನೀಡುವುದು ಮುಂತಾದವಾಗಿದ್ದವು.

ಈ ಭ್ರಷ್ಟಾಚಾರಿಗಳ ಗ್ಯಾಂಗು 1952 ರಿಂದಲೇ ಇಂಥ ಕಾರ್ಯಗಳಲ್ಲಿ ತೊಡಗಿದ್ದು, ಪೋಲೀಸ್ ಅಧಿಕಾರಿಗಳಿಗೆ ಈ ವಿಷಯ ತಿಳಿದೂ ಕ್ರಮಗಳನ್ನು ಕೈಗೊಳ್ಳಲು ವಿಫಲರಾಗಿದ್ದಾರೆಂದೂ ವರದಿ ಹೇಳುತ್ತದೆ.

ಸರಕಾರ ಈಗಲಾದರು ಕ್ರಮಗಳನ್ನು ಕೈಕೊಳ್ಳುವುದೋ ಹೇಗೆ ಎಂಬುದಿನ್ನೂ ಗೊತ್ತಾಗಿಲ್ಲ. ಇದರಲ್ಲಿ ಅನೇಕ ಮಹತ್ವದ ಅಧಿಕಾರಿಗಳು ಸೇರಿಕೊಂಡಿರುವುದರಿಂದ ಯಾವದೇ ಪರಿಣಾಮಕಾರಿಯಾದ ಕ್ರಮವು ಗಂಭೀರವಾದ ಪರಿಣಾಮವನ್ನು ಬೀರಬಹುದೆಂದೂ ಹೇಳಲಾಗಿದೆ.

ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಮುಷ್ಕರ ಮುರಿಯಲು ಇಂಟಕ್ ದ್ರೋಹಿಗಳ ಯತ್ನ

ಸೆಪ್ಟಂಬರ್ 8ರಿಂದ ಆರಂಭವಾದ ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಮುಷ್ಕರ ಮುಂದುವರಿಯುತ್ತಿದೆ. ಶಾಂತಿಯುತವಾಗಿ ನಡೆಯುತ್ತಿರುವ ಈ ಮುಷ್ಕರವನ್ನು ಮುರಿಯಲು ಇಂಟಕ್ ನಾಯಕರು ಮತ್ತು ಮಾಲಿಕರ ಭಂಟರು ಸತತವಾದ ಪ್ರಯತ್ನ ನಡೆಸುತ್ತಿದ್ದಾರೆ.

ಸ್ಥಳೀಯ ಪೋಲೀಸರ ಜೊತೆಗೆ ಹೇರಳವಾಗಿ ರಿಜರ್ವ್ ಪೋಲೀಸು ಪಡೆಯೂ ಸಹ ಅಲ್ಲಿ ಬಿಡಾರ ಹೂಡಿದೆ ಕೆಲಸಗಾರರನ್ನು ಬೆದರಿಸಿ, ಕೆಲಸಕ್ಕೆ ಹಿಂತಿರುಗುವಂತೆ ಒತ್ತಾಯಪಡಿಸಲು ಪೋಲೀಸರನ್ನು ಬಳಸುತ್ತಿದ್ದಾರೆಂದು ತಿಳಿದುಬಂದಿದೆ. ಎ. ಐ. ಟಿ. ಯು. ಸಿ. ನೇತೃತ್ವದಲ್ಲಿರುವ ಹಟ್ಟಿ ಚಿನ್ನದ ಗಣಿ ಕೆಲಸಗಾರರ ಸಂಘವನ್ನು ಮುರಿಯಲು, ಮುಷ್ಕರವನ್ನು ಮುರಿದು ಕಾರ್ಮಿಕರಿಗೆ ದ್ರೋಹ ಬಗೆಯಲು ಇಂಟಕ್ ನಾಯಕರು ಯತ್ನಿಸುತ್ತಿದ್ದಾರೆ. ಇವರ ಈ ಯತ್ನಕ್ಕೆ ಪೋಲೀಸರ ಸಹಾಯ ದೊರಕುತ್ತಿರುವುದು ಖಂಡನೀಯವಾಗಿದೆ

ಮಾಲಿಕರ ಭಂಟನಾಗಿ ಕೆಲಸ ಮಾಡುತ್ತಿರುವ ಕಾರ್ಮಿಕರ ಬೆಂಬಲವಿಲ್ಲದ ಇಂಟಕ್ ಸಂಘವು ಹೇಯವಾದ ಅಪಪ್ರಚಾರ ನಡೆಸುವ ಕಾರ್ಯದಲ್ಲಿ ತೊಡಗಿದೆ. ಈ ಸಂಘಕ್ಕೆ ಕಂಪೆನಿಯ ಮ್ಯಾನೇಜ್‌ಮೆಂಟಿನವರು ಸರ್ವರೀತಿಯ ಬೆಂಬಲವನ್ನು ಕೊಡುತ್ತಿದ್ದಾರೆ. ಕಂಪೆನಿಯ ಲೇಬರ್ ಆಫೀಸರ್ ಆಗಿರುವ ಶ್ರೀ ಐ. ಟಿ. ಎಸ್. ರಾವ್ ಎಂಬುವರು ಇಂಟಕ್ ಸಂಘದ ಮಾರ್ಗದರ್ಶಿಯಾಗಿ ವರ್ತಿಸುತ್ತಾ, ಕಾರ್ಮಿಕರಿಗೆ ದ್ರೋಹ ಬಗೆಯಲು ಯತ್ನಿಸುತ್ತಿದ್ದಾರೆ. ಇವರು ಕೆಲಸಗಾರರ ವಿ

ಕೊನೇ ಪುಟ ನೋಡಿ)

ಸಂಪಾದಕೀಯ

ಫ್ರಾನ್ಸ್‌ನ ಪ್ರಜಾಪ್ರಭುತ್ವ ಸಾವಿನ ದವಡೆಯಲ್ಲಿ !

ಸೆಪ್ಟಂಬರ್ 28, ಫ್ರಾನ್ಸ್ ದೇಶದ ನಾಲ್ಕನೆಯ ಗಣತಂತ್ರದ ಉಳಿವು ಅಳಿವಿನ ದಿನವಾಗಿದೆ. 1946ರಲ್ಲಿ ಸ್ಥಾಪಿತವಾದ ಗಣತಂತ್ರವು ಮುಕ್ತಾಯಗೊಳ್ಳುವ, ಫಾಸಿಸ್ಟ್ ಸರ್ವಾಧಿಕಾರಕ್ಕೆ ಎಡೆಕೊಡುವ ಉತ್ಕಟ ಸನ್ನಿವೇಶ ಫ್ರಾನ್ಸ್ ದೇಶದ ಮುಂದಿದೆ. ಇಡೀ ಪಶ್ಚಿಮ ಯೂರೋಪಿನಲ್ಲಿ ಬಂಡವಳಶಾಹೀ ಪ್ರಜಾಪ್ರಭುತ್ವದಲ್ಲಿ ಪ್ರಮುಖವಾಗಿದ್ದ ಫ್ರಾನ್ಸ್‌ನ ಮೇಲೆ ಇಂದು ಪ್ರಜಾಪ್ರಭುತ್ವದ ಕೊಲೆ ಎನಿಸುವಂತೆ ಫಾಸಿಸಂನ ಕಾರ್ಮೋಡ ಹಬ್ಬಿದೆ. ಜನರಲ್ ಡಿಗಾಲೆ ಮತ್ತು ತೀವ್ರ ಪ್ರತಿಗಾಮಿಗಳು ಮಂಡಿಸಿರುವ ನೂತನ ಕರಡು ಸಂವಿಧಾನದ ಮೇಲೆ ಅಂದು ಜನತೆ ತಮ್ಮ ಅಭಿಪ್ರಾಯ ವ್ಯಕ್ತಗೊಳಿಸಿದ್ದಾರೆ. ಪ್ರತಿಗಾಮಿ ಶಕ್ತಿಗಳು ಮತ್ತು ಡಿಗಾಲ್ ಈ ಕಾರ್ಯದಲ್ಲಿ ಬಹುಮತಗಳಿಸಿ ಯಶಸ್ವಿಯಾದಲ್ಲಿ ಫ್ರಾನ್ಸ್‌ನಲ್ಲಿ ಪ್ರಜಾಪ್ರಭುತ್ವದ ಸಮಾಧಿಯಾದಂತೆಯೇ.

ಹೊಸ ಕರಡು ಘಟನೆಯಂತೆ ಸರಕಾರದ ಅಧಿಕಾರವು ಸಂಪೂರ್ಣವಾಗಿ ರಾಷ್ಟ್ರಾಧ್ಯಕ್ಷರ ಕೈಯಲ್ಲಿ ಕೇಂದ್ರೀಕೃತವಾಗುತ್ತೆ, ಅಂದರೆ ಡಿಗಾಲೆಯ ವಶದಲ್ಲಿ ಸೇರುತ್ತದೆ. ಆಲ್ಜೀರಿಯದಲ್ಲಿ ಕಳೆದ ಮೇ ತಿಂಗಳಲ್ಲಿ ಅರಮನೆ ಕ್ರಾಂತಿ ನಡೆಸಿ, ಫಾಸಿಸ್ಟ್ ಅನುಯಾಯಿಗಳಾದ ಸೊಸುಲೆ ಮೊದಲಾದವರ ಕೈಗೆ ಅಧಿಕಾರ ಹೋಗುತ್ತದೆ. ಅರ್ಥಾತ್ ಫ್ರಾನ್ಸ್‌ನಲ್ಲಿ ಫಾಸಿಸ್ಟ್ ಸರ್ವಾಧಿಕಾರ ಸ್ಥಾಪಿತವಾಗುತ್ತದೆ. ರಾಷ್ಟ್ರಾಧ್ಯಕ್ಷರ ಅಧಿಕಾರವಧಿಯು ಏಳು ವರ್ಷಗಳಿದ್ದು, ಅವರನ್ನು ತೆಗೆದುಹಾಕಲು ಪಾರ್ಲಿಮೆಂಟಿಗೂ ಸಹ ಅಧಿಕಾರವಿರುವುದಿಲ್ಲ. ಪಾರ್ಲಿಮೆಂಟಿನ ಅನುಮತಿಯಿಲ್ಲದೆಯೇ ಅವರು ಸಚಿವರುಗಳನ್ನು ನೇಮಿಸಬಹುದು ಇಲ್ಲವೇ ಕಿತ್ತುಹಾಕಬಹುದು. ತನಗೆ ಸರಿಯೆಂದು ತೋರಿದಲ್ಲಿ ಪಾರ್ಲಿಮೆಂಟನ್ನೇ ವಿಸರ್ಜಿಸಬಹುದು. ಅವರು ಯಾವುದೇ ಆಜ್ಞೆಯನ್ನೂ ಕಾಯಿದೆಯನ್ನೂ ಜಾರಿಗೆ ತರಬಹುದು. ತುರ್ತಿನ ಪರಿಸ್ಥಿತಿ ಬಂದೊದಗಿದಲ್ಲಿ ಅವರಿಗೆ ಸರಿತೋರಿದ ಕ್ರಮ ತೆಗೆದುಕೊಳ್ಳಬಹುದು. ಇಂಥ ಅಮಿತವಾದ ಅಧಿಕಾರವು ಸರ್ವಾಧಿಕಾರದ ಪ್ರತೀಕವಲ್ಲದೆ ಮತ್ತೇನು ?

1946ರಲ್ಲಿ ಹಿಟ್ಲರನ ಫಾಸಿಸ್ಟ್ ಶಕ್ತಿಗಳ ವಿರೋಧವಾಗಿ ಹೋರಾಟ ನಡೆಸಿ ಅಪಾರವಾದ ತ್ಯಾಗ ಬಲಿದಾನಗಳ ನಂತರ ಫ್ರಾನ್ಸ್‌ನಲ್ಲಿ ಈಗಿರುವ ಸಂವಿಧಾನವು ರೂಪಿಸಲ್ಪಟ್ಟಿತ್ತು. ಜನತೆಯಿಂದ ಆಯ್ಕೆಯಾದ ಪಾರ್ಲಿಮೆಂಟಿಗೆ ಜವಾಬುದಾರನಾಗಿತ್ತು. ಅಧ್ಯಕ್ಷರು ಪಾರ್ಲಿಮೆಂಟಿನ ಎರಡೂ ಸಭೆಗಳಿಂದ ಆಯ್ಕೆಯಾಗಿದ್ದು ಮಿತವಾದ ಅಧಿಕಾರ ಪಡೆದವರಾಗಿದ್ದರು. ಅಲ್ಲದೆ ಘಟನೆಯಲ್ಲಿ ಸ್ತ್ರೀಯರಿಗೆ ಸಮಾನ ಹಕ್ಕು, ದುಡಿಯುವ ಹಕ್ಕು, ಮುಷ್ಕರದ ಹಕ್ಕು ಸಂಘಟನಾ ಹಕ್ಕೂ ಕೊಡಲಾಗಿತ್ತು. ರಾಷ್ಟ್ರೀಯ ಮಂಡಲಿಗೆ ನೇರವಾದ ಚುನಾವಣೆಯು ಇತ್ತು. ಈಗ ಇವೆಲ್ಲವನ್ನೂ ಹೊಸ ಸಂವಿಧಾನದಲ್ಲಿ ಕಸಿದುಕೊಳ್ಳಲಾಗಿದೆ.

ಇನ್ನೂ ಫ್ರಾನ್ಸ್‌ನ ವಸಾಹತುಗಳ ಸ್ವಾತಂತ್ರ್ಯದ ಬಗ್ಗೆ ಹೊಸ ಸಂವಿಧಾನದಲ್ಲಿ ತೀರ ವಿರುದ್ಧವಾದ ನಿಲುವೆಯನ್ನು ತೆಗೆದುಕೊಳ್ಳಲಾಗಿದೆ. ಆಲ್ಜೀರಿಯ, ಮತ್ತಿತರ ಆಫ್ರಿಕದ ವಸಾಹತುಗಳನ್ನು ಫ್ರಾನ್ಸ್ ದೇಶದ ಪ್ರಾಂತಗಳೆಂದು ಸೇರಿಸಲಾಗಿದೆ. ಅಂದ ಮೇಲೆ ಈ ವಸಾಹತುಗಳ ಸ್ವಾತಂತ್ರ್ಯ ಹೋರಾಟವನ್ನು ದಬ್ಬಾಳಿಕೆಯಿಂದ ದಮನಗೊಳಿಸಲು ಘಟನಾಬದ್ಧವಾಗಿ ತೀವ್ರಗೊಳಿಸಲಾಗುವುದು ಎಂದೇ ಅರ್ಥ.

ಫ್ರಾನ್ಸ್‌ನ ಜನತೆಯು ಇಂಥ ಪ್ರಜಾಪ್ರಭುತ್ವ ವಿರೋಧೀ ಫಾಸಿಸ್ಟ್ ಘಟನೆಯ ಬಗ್ಗೆ ತಮ್ಮ ತೀರ್ಪನ್ನೀಯಲಿದ್ದಾರೆ. ಪ್ರಜಾಪ್ರಭುತ್ವ ಶಕ್ತಿಗಳು, ಪುರೋಗಾಮಿ ಶಕ್ತಿಗಳು ಡಿಗಾಲೆಯ ಯತ್ನವನ್ನು ಮುರಿಯಲು ಯತ್ನಿಸುತ್ತಿವೆ. ಸಂವಿಧಾನವನ್ನು ಎದುರಿಸಲು ತೀವ್ರವಾದ ಚಳವಳಿ ನಡೆಯುತ್ತಿದೆ. ಫ್ರಾನ್ಸ್‌ನ ಸೋಷಲಿಸ್ಟ್ ಪಕ್ಷದಲ್ಲಿ ಈ ಬಗ್ಗೆ ಒಡಕುಂಟಾಗಿದೆ. ಮೆಂಡೆಸ್ ಫ್ರಾನ್ಸ್‌ನ ನಾಯಕತ್ವದಲ್ಲಿರುವ ಮಿತವಾದಿ ಎಡ ಸೋಷಲಿಸ್ಟರು ಸಂವಿಧಾನವನ್ನು ವಿರೋಧಿಸಿದ್ದಾರೆ. ಫ್ರಾನ್ಸ್‌ನಲ್ಲಿ ಬಲಶಾಲಿಯಾದ ಕಮ್ಯೂನಿಸ್ಟ್ ಪಕ್ಷ ಸಂವಿಧಾನವನ್ನು ವಿರೋಧಿಸಿ ತೀವ್ರವಾದ ಚಳವಳಿಯನ್ನು ನಡೆಸುತ್ತಿದೆ. ಸೆಪ್ಟಂಬರ್ 28ರಂದು ಡಿಗಾಲೆಯ ಯತ್ನವನ್ನು ಭಗ್ನಗೊಳಿಸಲು ಸರ್ವ ಪ್ರಯತ್ನ ನಡೆಸಬೇಕೆಂದು ಎಲ್ಲ ಪುರೋಗಾಮಿ ಶಕ್ತಿಗಳಿಗೂ ಕರೆಯಿತ್ತಿದೆ. ಗಣತಂತ್ರವನ್ನು ಕೊಲೆ ಮಾಡಲು ಹವಣಿಸುತ್ತಿರುವ ಈ ಸಂವಿಧಾನವನ್ನು ತಿರಸ್ಕರಿಸಬೇಕೆಂದು ಕಮ್ಯೂನಿಸ್ಟ್ ಪಾರ್ಟಿ ಜನತೆಗೆ ಕರೆಯಿತ್ತಿದೆ. ಭಾರೀ ಪ್ರದರ್ಶನಗಳು, ಸಭೆಗಳು ಎಲ್ಲೆಡೆಯಲ್ಲಿಯೂ ನಡೆಯುತ್ತಿವೆ.

ಪ್ರಜಾಪ್ರಭುತ್ವದ ರಕ್ಷಣೆಗಾಗಿ, ಜನತೆಯ ಹಕ್ಕುಬಾಧ್ಯತೆಗಳ ರಕ್ಷಣೆಗಾಗಿ ಫ್ರಾನ್ಸ್‌ನಲ್ಲಿ ಇಂದು ಪುರೋಗಾಮಿ ಮತ್ತು ಪ್ರತಿಗಾಮಿ ಶಕ್ತಿಗಳ ನಡುವೆ ತೀವ್ರವಾದ ಸಮರ ನಡೆಯುತ್ತಿದೆ. ಈ ಸಮರದಲ್ಲಿ ಪ್ರಜಾಪ್ರಭುತ್ವ ಶಕ್ತಿಗಳಿಗೆ ವಿಜಯ ದೊರಕಲಿ ಎಂದು ನಾವು ಹಾರೈಸೋಣ.

ವಾರದ ವರ್ತಮಾನ ಸಮೀಕ್ಷೆ

ಉತ್ತರ ಪ್ರದೇಶದಲ್ಲಿ ಆಹಾರ ಚಳುವಳಿ

ಉತ್ತರ ಪ್ರದೇಶದಲ್ಲಿನ ಆಹಾರ ಪರಿಸ್ಥಿತಿಯ ಬಗ್ಗೆ ಸರಕಾರದ ಗಮನವನ್ನು ಸೆಳೆಯಲು ಮತ್ತು ಸರಕಾರದ ಆಹಾರದ ನೀತಿಯನ್ನು ವಿರೋಧಿಸಲು ನಡೆಯುತ್ತಿರುವ ಚಳವಳಿಯು ಸಾಕಷ್ಟು ಪರಿಣಾಮಕಾರಿಯಾಗಿದೆ. ಎಲ್ಲ ಎಡಪಕ್ಷಗಳೂ ಕೂಡಿ ನಡೆಸುತ್ತಿರುವ ಚಳುವಳಿಯ ಪರಿಣಾಮವಾಗಿ ಸರಕಾರವು ಕೆಲವು ಕ್ರಮಗಳನ್ನಾದರೂ ತೆಗೆದುಕೊಳ್ಳಬೇಕಾಗಿ ಬಂದಿದೆ.

ಸೆಪ್ಟಂಬರ್ 12ರಂದು ಉತ್ತರ ಪ್ರದೇಶದಲ್ಲಿ ಸಾರ್ವತ್ರಿಕ ಹರತಾಳ ನಡೆಯಿತು. ಕಮ್ಯೂನಿಸ್ಟ್ ಪಕ್ಷ, ಪ್ರಸವಾ ಪಕ್ಷ ಮತ್ತು ಸೋಷಲಿಸ್ಟ್ ಪಕ್ಷಗಳು ಹರತಾಳಕ್ಕೆ ಕರೆಇತ್ತಿದ್ದುವು. ಹರತಾಳವು ಸಂಪೂರ್ಣವಾಗಿ ಯಶಸ್ವಿಯಾಯಿತು. ಸ್ವಾತಂತ್ರ್ಯಾನಂತರದಲ್ಲಿ ರಾಜ್ಯದಾದ್ಯಂತವೂ ನಡೆದಿರುವ ಬೃಹತ್‌ಪ್ರದರ್ಶನ ಇದೊಂದೇ ಎಂದು ಹೇಳಲಾಗಿದೆ.

ಪರಿಸ್ಥಿತಿಯು ಇನ್ನೂ ಚಿಂತಾಜನಕವಾಗಿಯೇ ಇದ್ದು, ಅನೇಕ ಪ್ರದೇಶಗಳಲ್ಲಿ ಹಸಿವಿನಿಂದ ಮರಣ ಸಂಭವಿಸಿವೆ ಎಂದು ಪತ್ರಿಕೆಗಳು ವರದಿ ಮಾಡಿವೆ.

ಸಂಪೂರ್ಣಾನಂದ್ ಸರಕಾರ ವಿರೋಧ ಪಕ್ಷಗಳು ನಡೆಸುತ್ತಿರುವ ಈ ಚಳವಳಿಯ ಮೇಲೆ ತೀವ್ರವಾದ ದಬ್ಬಾಳಿಕೆ ನಡೆಸುತ್ತಿದೆ. ಪರಿಸ್ಥಿತಿಯನ್ನು ಕುರಿತು ವಿರೋಧ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸಲು ನಿರಾಕರಿಸಿದೆ.

ರಾಜ್ಯಪಾಲರಾದ ಶ್ರೀ ವಿ. ವಿ. ಗಿರಿಯವರು ರಾಜ್ಯದ ಆಹಾರ ಪರಿಸ್ಥಿತಿಯನ್ನು ಸುಧಾರಿಸಲು ವಿರೋಧ ಪಕ್ಷಗಳು ಸಹಕರಿಸಬೇಕೆಂದು ವಿರೋಧ ಪಕ್ಷಗಳಿಗೆ ಇತ್ತ ಆಹ್ವಾನವನ್ನು ಸಂಪೂರ್ಣಾನಂದ್ ಪ್ರತಿಭಟಿಸಿರುವರೆಂದು ತಿಳಿದುಬಂದಿದೆ. ಅಲ್ಲದೆ ರಾಜ್ಯಪಾಲರು ಇತ್ತೀಚೆಗೆ ದೆಹಲಿಗೆ ಭೆಟ್ಟಿ ಇತ್ತುದನ್ನೂ, ವಿರೋಧ ಪಕ್ಷಗಳ ಸದಸ್ಯರನ್ನು ಭೆಟ್ಟಿಯಾಗುತ್ತಿರುವುದನ್ನೂ ಸಂಪೂರ್ಣಾನಂದ್ ವಿರೋಧಿಸಿದ್ದಾರೆಂದು ತಿಳಿದುಬಂದಿದೆ. ಸಂಪೂರ್ಣಾನಂದ್ ಸರಕಾರದ ಜನವಿರೋಧಿ ನೀತಿ ಬಯಲಿಗೆ ಬಂದಿರುವಷ್ಟು ಈಚೆಗೆ ಇನ್ನಾವುದೂ ಇಲ್ಲವೆಂದು ಹೇಳಬಹುದು.

ಲೋಕಸಭೆಯಲ್ಲಿ ಕೇರಳದ ಪರಿಸ್ಥಿತಿ ಚರ್ಚೆ

ಲೋಕಸಭೆಯಲ್ಲಿ ಕೇರಳದಲ್ಲಿನ ಪರಿಸ್ಥಿತಿಯನ್ನು ಕುರಿತು ಚರ್ಚೆ ಪ್ರಸಕ್ತ ಅಧಿವೇಶನದಲ್ಲಿ ನಡೆಯುವುದಿಲ್ಲವೆಂದು ವರದಿಯಾಗಿದೆ. ಪ್ರಜಾಸೋಷಲಿಸ್ಟ್ ಪಕ್ಷದ ಸದಸ್ಯರಾದ ಡಾ॥ ಕೆ. ಬಿ. ಮೆನನ್‌ರವರು ಹಿಂದೆ ಸೂಚಿಸಿದ್ದ ನಿಲುವಳಿಯ ಸೂಚನೆಯ ಮೇಲೆ ಸೆಪ್ಟಂಬರ್ 22ರಂದು ಲೋಕಸಭೆಯಲ್ಲಿ ಮತ್ತೊಮ್ಮೆ ಪ್ರಸ್ತಾಪ ಬಂದಾಗ, ಕೇರಳ ಸರಕಾರದಿಂದ ಆರೋಪ

(೯ನೇ ಪುಟ ನೋಡಿ)

ಇದೋ ಅಭಿವಂದನೆ !

ನಮ್ಮ ನೆರೆಯವರಾಗಿರುವ, ನಮ್ಮ ಆತ್ಮೀಯರಾಗಿರುವ ಚೀಣಿ ಭಾಂಧವರೆ ಅಕ್ಟೋಬರ್ ೧, ನಿಮ್ಮ ಜನತಾ ರಾಜ್ಯದ ಮಹೋತ್ಸವ ದಿನದಂದು ನಮ್ಮ ಅಭಿವಂದನೆಗಳನ್ನು ನಿಮಗೆ ಸಲ್ಲಿಸುತ್ತಿದ್ದೇವೆ.

ನಮ್ಮ ಹಾಗೆ ಶತಶತಮಾನಗಳ ಕಾಲ ಪಾಳೆಯಗಾರೀ ಪದ್ಧತಿಯಲ್ಲೂ, ಸಾಮ್ರಾಜ್ಯಶಾಹಿಗಳ ಶೋಷಣೆಯಲ್ಲೂ ಸಿಲುಕಿ ನರಳಿ ಕೊನೆಗೆ ಸಿಡಿದೆದ್ದು ಜನತಾರಾಜ್ಯ ಸ್ಥಾಪಿಸಿ ಏಷ್ಯಾ ವಿಮೋಚನಾ ಸ್ಫೂರ್ತಿಗೆ ಕಾರಣರಾದ ನಿಮಗೆ ನಮ್ಮ ಅಭಿವಂದನೆಗಳು.

ನಿಮ್ಮ ಸಮಾಜವಾದೀ ಸಾಧನೆಗಳು ನಮಗೊಂದು ಮಾದರಿ, ಸ್ಫೂರ್ತಿ. ಲೋಕದ ಸಮಾಜವಾದೀ ಶಿಬಿರಕ್ಕೆ ನಿವೊಂದು ಬಲ, ಸಾಮ್ರಾಜ್ಯಶಾಹಿಗಳ ಹುಟ್ಟಡಗಿಸಲು ಎದ್ದು ನಿಂತ ಶಕ್ತಿಗಳಲ್ಲಿ ನಿಮ್ಮ ಪಾತ್ರವು ದೊಡ್ಡದು. ನಿಮ್ಮ ಬಲ, ನೀವು ಅಭಿವೃದ್ಧಿಗೊಳ್ಳುವುದು ವಿಶ್ವಶಾಂತಿಗೆ ಸಹಾಯಕ.

ನಿಮ್ಮ ದೇಶದ ಮನೆ ಮುರುಕರಿಂದ ನಿಮ್ಮ ನಾಡಿನ ಕೆಲವು ಭಾಗ ಇನ್ನೂ ಸಾಮ್ರಾಜ್ಯಶಾಹಿಗಳ ಹಿಡಿತದಲ್ಲಿರುವುದು ನಿಮಗೂ ಏಷ್ಯಾಕ್ಕೂ ಅಪಾಯಕಾರಿ. ಅವುಗಳ ವಿಮೋಚನಾ ಕಾರ್ಯದಲ್ಲಿ ನಿಮಗೆ ನಮ್ಮ ಹೃತ್ಪೂರ್ವಕ ಬೆಂಬಲ.

ನಮ್ಮಿಬ್ಬರ ಸ್ನೇಹ ಏಷ್ಯಾ ಸ್ವಾತಂತ್ರ್ಯ ರಕ್ಷಣೆಗೂ ವಿಶ್ವಶಾಂತಿಗೂ ಮಹತ್ತರವಾದ ಅಗತ್ಯ. ನಿಮ್ಮ ಪ್ರಜಾರಾಜ್ಯ ದಿನೋತ್ಸವ ಇಲ್ಲಿ ನಮಗೆ ಭಾರತ–ಚೀಣಾ ಮೈತ್ರಿ ದಿನ.

ನಿಮಗೆ ಯಶಸ್ಸು ಕೋರುತ್ತೇವೆ, ಬಂಧುತ್ವದ ವಂದನೆ ಸಲ್ಲಿಸುತ್ತೇವೆ.

- ಜನತಾ ಚೀಣಾ ಜಿಂದಾಬಾದ್ !
- ಹಿಂದೀ–ಚೀಣಿ ಭಾಯಿ ಭಾಯಿ !!

"ವ್ಯವಸ್ಥಿತವಾಗಿ, ಯೋಜನಾಬದ್ಧವಾಗಿ ವ್ಯವಸಾಯಿಕ ಹಾಗೂ ಕೈಗಾರಿಕಾ ಅಭಿವೃದ್ಧಿಗಳನ್ನೂ ಆಧುನಿಕ ಯಾಂತ್ರೀಕರಣದಿಂದ ಒಟ್ಟು ರಾಷ್ಟ್ರದ ಆರ್ಥಿಕ ಅಭಿವೃದ್ಧಿಯನ್ನೂ ಸಾಧಿಸಲಾಗುವುದು. ರಾಷ್ಟ್ರದ ಎಲ್ಲೆಡೆಗೂ ವಿದ್ಯುತ್‌ಶಕ್ತಿಯನ್ನು ತರಲಾಗುವುದು.

"ಎಲ್ಲಾ ಸಣ್ಣ ಪುಟ್ಟ ನಗರಗಳನ್ನೂ ಔದ್ಯೋಗಿಕ ನಗರಗಳನ್ನಾಗಿ ಪರಿವರ್ತಿಸುವುದು, ಅನುಕೂಲ ಸ್ಥಿತಿಯಲ್ಲಿರುವ ಸ್ಥಳಗಳಲ್ಲಿ ನೂತನವಾಗಿ ಔದ್ಯೋಗಿಕ ನೆಲೆಗಳನ್ನು ಸ್ಥಾಪಿಸುವುದು, ಎಲ್ಲಾ ಪ್ರಾಂತ್ಯ, ಪ್ರದೇಶಗಳಲ್ಲೂ ಔದ್ಯೋಗಿಕ ಉತ್ಪಾದನೆಯನ್ನು ಹೆಚ್ಚಿಸುವುದು, ಟೆಲಿ ಕಮ್ಯೂನಿಕೇಷನ್‌ಗಳು ರಾಷ್ಟ್ರವ್ಯಾಪಕವಾಗಿ ಸ್ಥಾಪಿಸಲ್ಪಡುವುದೇ" ಇಂದಿನ ಚೀನಾದ ಮಹತ್ತರ ಧ್ಯೇಯವೆಂದು ಉಪಾಧ್ಯಕ್ಷ ಲೀಯು ಷಾವೊ-ಚಿ ಅವರು ಎನೆಯ ಕಮ್ಯೂನಿಸ್ಟ್ ಪಾರ್ಟಿ ಅಧಿವೇಶನದಲ್ಲಿ ಘೋಷಿಸಿದರು. ಈ ದಿಶೆಯಲ್ಲಿ ಬೃಹದಾಕಾರದಲ್ಲಿ ಇಂದು ಅಭಿವೃದ್ಧಿ ಕಾರ್ಯಗಳು ಅಲ್ಲಿ ನಡೆದಿವೆ. ಇಂದು ಅಲ್ಲಿ ಉತ್ಪಾದಿಸುತ್ತಿರುವ 19,000 ಕಿಲೋವಾಟ್ ವಿದ್ಯುಚ್ಛಕ್ತಿಯನ್ನು ಕೋಟಿ ಕೋಟಿ ಕಿಲೋವಾಟ್ ವಿದ್ಯುದುತ್ಪಾದನೆಗೆ ಸಿದ್ಧಪಡಿಸಲಾಗಿದೆ. ಕಬ್ಬಿಣ ಉಕ್ಕುಗಳ ಉತ್ಪಾದನೆಯನ್ನು ಈಗಿನಕ್ಕಿಂತ 20ರಷ್ಟು ಪಾಲು ಹೆಚ್ಚಿಸಲು ಕಾರ್ಯ ನಡೆದಿದೆ.

ಸಾಂಸ್ಕೃತಿಕ ಕ್ರಾಂತಿ

ಅನಕ್ಷರತೆಯನ್ನು ಸಂಪೂರ್ಣವಾಗಿ ತೊಡೆದು ಹಾಕುವುದು, ಕಡ್ಡಾಯದ ಪ್ರಾಥಮಿಕ ಶಿಕ್ಷಣವನ್ನು ಕ್ರಮೇಣವಾಗಿ ಮಾಧ್ಯಮಿಕ ಶಾಲೆಗಳಿಗೂ ವ್ಯಾಪಿಸುವುದು, ವೈಜ್ಞಾನಿಕ ಶಾಲೆ ಕಾಲೇಜುಗಳನ್ನು ಹೆಚ್ಚಿಸುವುದು,



"ಸುಫಲಕಾರಿಯಾದ ಸಮಾಜವಾದೀ ರಾಷ್ಟ್ರವನ್ನು ಕಟ್ಟೋಣ"

ರಷ್ಟು ಹೆಚ್ಚಳವಾಯಿತು. ಈ ವರುಷದ ಬೇಸಗೆಯ ಆಹಾರ ಧಾನ್ಯಗಳ ಉತ್ಪತ್ತಿ ಕಳೆದ ವರುಷಕ್ಕಿಂತ ಹೆಚ್ಚಾಗಿದ್ದು ಶೇ. 1·69ರಷ್ಟಿದೆ. ಚಳಿಗಾಲದ ಗೋಧಿಯ ಉತ್ಪತ್ತಿ 35.45 ಮಿಲಿಯ ಟನ್ನುಗಳಷ್ಟಾಗಿದ್ದು ಅಮೇರಿಕೆಯ ಉತ್ಪತ್ತಿಯನ್ನು ಮೀರಿನಿಂತಿದೆ. ಪ್ರಪಂಚದಲ್ಲಿ ಗೋಧಿ ಬೆಳೆಯುವ ರಾಷ್ಟ್ರಗಳಲ್ಲಿ ಸೋವಿಯತ್ ರಷ್ಯಕ್ಕೆ ಪ್ರಥಮ ಸ್ಥಾನವಿದ್ದರೆ ಚೀನಾ ಎರಡನೆಯ ಸ್ಥಳವನ್ನು ಪಡೆಯಿತು.

ಇನ್ನು ಒಂದು ವರುಷದೊಳಗಾಗಿ 20ಮಿಲಿಯ ಬೀಡು ಕಬ್ಬಿಣವನ್ನು ಉತ್ಪಾದಿಸುವ 13,000 ಹೊಸ ಕುಲುಮೆಗಳನ್ನು ಸ್ಥಾಪಿಸ

ಸಮಾಜವಾದೀ ಶಿಬಿರದ ಮಹಾಶಕ್ತಿ–ನವ ಚೀಣ

"ನಮ್ಮೆಲ್ಲ ಬಲವಾದ ಶಕ್ತಿಯನ್ನು ಬಳಸಿಕೊಂಡು, ಶಾಶ್ವತವಾಗಿ ಮುನ್ನುಗ್ಗುತ್ತ, ತೀವ್ರತಮ ವೇಗದಲ್ಲಿ ಸುಫಲಕಾರಿಯಾದ ಆರ್ಥಿಕ ಫಲಿತಾಂಶಗಳನ್ನು ನೀಡುವಂಥ ಸಮಾಜವಾದೀ ರಾಷ್ಟ್ರವನ್ನು ಕಟ್ಟೋಣ".

ಚೀನಾದ ಯಾವ ಭಾಗದಲ್ಲಾದರೂ ನೀವು ನಡೆದುಹೋದರೆ ನಿಮ್ಮ ಕಿವಿಗಳ ಮೇಲೆ ಬೀಳುವ ಶಬ್ದಗಳಿವು. ಸಮಾಜವಾದಿ ರಚನೆಗಾಗಿ ಚೀನಾ ಅನುಸರಿಸುತ್ತಿರುವ ಸರ್ವಮಾನ್ಯ ಸಾಮಾನ್ಯ ದಾರಿ ಇದು. ಅಧ್ಯಕ್ಷ ಮಾವೋ ತ್ಸೆ ತುಂಗ್ ತೋರಿದ ದಾರಿ ಇದು.

ಕಳೆದ ಎಂಟು ವರುಷಗಳಿಂದ ಚೀನವು ತೊಡಗಿರುವ ರಾಷ್ಟ್ರ ಪುನರ್ರಚನೆಯಲ್ಲಿ ಅನುಸರಿಸಿದ ನೀತಿ, ಕೈಕೊಂಡ ಕ್ರಮಗಳನ್ನೆಲ್ಲ ವಾಸ್ತವಿಕತೆಯಲ್ಲಿ ಒರೆಗಿಟ್ಟು ಅವುಗಳ ಔಚಿತ್ಯವನ್ನು, ಯೋಗ್ಯತೆಯನ್ನು, ಸರಿಯಾಗಿರುವಿಕೆಯನ್ನು ಪರೀಕ್ಷಿಸಲಾಗಿದೆ. ಈ ಸಮಾಜವಾದದ ಮಹಾಶಕ್ತಿ ಅನುಪಮೇಯ ವೇಗದಲ್ಲಿ ಜನರನ್ನೂ ರಾಷ್ಟ್ರವನ್ನೂ ಮುನ್ನಡೆಸುತ್ತಿದೆ.

ಆರ್ಥಿಕರಂಗದಲ್ಲಿ ಅಂದರೆ—ವ್ಯವಸಾಯ, ಕೈಗಾರಿಕೆ, ಬಂಡವಾಳಿಗರ ಉದ್ಯಮ ಇವುಗಳಲ್ಲೆಲ್ಲ ನಡೆದಿರುವ ಸಮಾಜವಾದಿ ಕ್ರಾಂತಿ 1955—56ರ ಚಳಿಗಾಲ ಮತ್ತು ಬೇಸಗೆಯ ಕಾಲಕ್ಕೆಂದರೆ ಯೋಗ್ಯ ಫಲಗಳನ್ನಿತ್ತಿತು. 1956ರ ಅಂತ್ಯದಲ್ಲಿ ಸಂಪೂರ್ಣತಃ ವಿಜಯವನ್ನು ಸಾಧಿಸಿತು. 1957ರ ಕಾಲಾವಧಿಯಲ್ಲಿ ಇದು ಬಲಿಷ್ಠವಾಯಿತು, ಹೆಚ್ಚು ವ್ಯಾಪಕವಾಯಿತು. ಉತ್ಪಾದನಾ ಸಾಧನಗಳೆಲ್ಲ ಸಮಾಜವಾದೀ ವ್ಯವಸ್ಥೆಗೊಳಪಟ್ಟವು.

ಇಂದು ಸಹಕಾರಿ ಬೇಸಾಯದಲ್ಲಿ ಶೇ. 98 ಜನ ರೈತರಿರುವರು. (ಇವರಲ್ಲಿ ಶೇ. 96 ಜನ ರೈತರು, ಸಾಮೂನ್ಯ ಒಡೆತನಕ್ಕೆ ಸೇರಿದ ಭೂಮಿ ಮತ್ತು ಉತ್ಪಾದನಾ ಸಾಧನಗಳು ಇವೆ). ಖಾಸಗೀ ಒಡೆತನದಲ್ಲಿರುವ ಉದ್ಯಮಗಳ ಉತ್ಪಾದನೆಯ ಮೌಲ್ಯ ಶೇ. 0.1 ಮಾತ್ರ ಇದೆ.

ಭದ್ರ ತಳಹದಿ

ಚೀನವು ಇಂದು ಸಂಪೂರ್ಣ ಸಮಾಜವಾದೀ ಒಡೆತನದ ರಾಷ್ಟ್ರವೆಂದು ಹೇಳಬಹುದು. ಖಾಸಗೀ ಒಡೆತನ ಇಂದು ಇಲ್ಲಿ ಇಲ್ಲವೇ ಇಲ್ಲವೆಂದು ಹೇಳಬಹುದು. ಸಮಾಜವಾದೀ ರಾಜಕೀಯ ವ್ಯವಸ್ಥೆ ಇಂದು ಭದ್ರವಾದ ಪರಿಪೂರ್ಣವಾದ ಆರ್ಥಿಕ ತಳಹದಿಯನ್ನು ಹಾಕಿದೆ. ರಾಷ್ಟ್ರಾದ್ಯಂತ "ನೇರ್ಪಡಿಸುವ ಚಳವಳ"ವನ್ನು (Rectification movement) ನಡೆಸಿ ಬಲವಾದಿಗಳನ್ನು ಶಕ್ತಿಗುಂದಿಸಲಾಯಿತು. ಬೂರ್ಜ್ವಾ ಬಲವಾದಿಗಳ ವಿರುದ್ಧ ಭಾರೀ ಹೋರಾಟ ನಡೆಸಿ ಜನತೆಯನ್ನು ಕಮ್ಯೂನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ಸಮಾಜವಾದೀ ರಂಗದಲ್ಲಿ ತಂದು ವರ್ಗ ವ್ಯತ್ಯಾಸವನ್ನು ನಿವಾರಿಸಲಾಯಿತು.

1957ರಲ್ಲಿ ಪ್ರಥಮ ಪಂಚ ವಾರ್ಷಿಕ ಯೋಜನೆಯ ಯಶಸ್ಸು ನಿಗದಿಯಾದುದನ್ನು ದಾಟಿಹೋಯಿತು. ಯಶಸ್ವಿಯಾದ ಈ ಯೋಜನೆ ಸಮಾಜವಾದೀ ಔದ್ಯೋಗಿಕ ರಾಷ್ಟ್ರದ ರಚನೆಗೆ ಭದ್ರ ಬುನಾದಿಯನ್ನು ಹಾಕಿ, ವ್ಯವಸಾಯದಲ್ಲಿ ಪ್ರಗತಿಪರ ಹಾದಿಯನ್ನು ಹಿಡಿಯಿತು. ಅದರಂತೆ ಶೈಕ್ಷಣಿಕ, ಸಾಂಸ್ಕೃತಿಕ, ಮತ್ತು ವೈಜ್ಞಾನಿಕ ಕ್ಷೇತ್ರಗಳಲ್ಲೂ ಕೃಷಿ ನಡೆದು ಸಮಾಜವಾದೀ ವ್ಯವಸ್ಥೆಗೆ ವಾಸ್ತವಿಕ ತಳಹದಿಯನ್ನು ಹಾಕಲಾಯಿತು.

ಮುಖ್ಯ ವಿಚಾರ

ಅಧ್ಯಕ್ಷ ಮಾವೋರವರು ಕೊಟ್ಟ ಸಾಮಾನ್ಯ ನಿಯಮ ರಾಷ್ಟ್ರದ ೬೦೦ ಮಿಲಿಯ ಜನರ ಕ್ರಿಯಾತ್ಮಕ ಶಕ್ತಿಯನ್ನು ರಾಷ್ಟ್ರದ ಸಂಪನ್ಮೂಲಗಳನು ಪುನರ್ರಚನೆಗಾಗಿ ಉಪಯೋಗಿಸಲು ಚೇತರಿಸಲಾಯಿತು. ಅಲ್ಪಾವಧಿಯಲ್ಲಿ ಉನ್ನತಮಟ್ಟದ ಪ್ರಗತಿಗಾಗಿ ಶ್ರಮಿಸಲಾಯಿತು. ಬೇರೆ ರಾಷ್ಟ್ರಗಳೂ, ಬಂಡವಾಳಶಾಹಿ ರಾಷ್ಟ್ರಗಳೂ ಶತಮಾನಗಳಲ್ಲಿ ಸಾಧಿಸಿದ ಪ್ರಗತಿಯನ್ನು ಕೆಲವು ದಶಕಗಳಲ್ಲಿ ಸಾಧಿಸುವ, ಉತ್ಪಾದನೆಯನ್ನು ಹೆಚ್ಚಿಸುವ ಮಹಾಕಾರ್ಯದಲ್ಲಿ ಪಣತೊಟ್ಟು ಚೀನಾ ಇಂದು ದುಡಿಯುತ್ತಿದೆ.

ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸುವುದು, ಲಿಪಿಯಿಲ್ಲದ ಅಲ್ಪ ಸಂಖ್ಯಾತರ ಭಾಷೆಗಳಿಗೆ ಲಿಪಿ ಒದಗಿಸುವುದು, ಹ್ಯಾನ್ ಜನ ಬಳಸುತ್ತಿದ್ದ ಭಾಷೆಯನ್ನು ಪರಿಷ್ಕರಿಸುವುದು, ಮೂಢ ನಂಬಿಕೆಗಳನ್ನು ತೊಲಗಿಸುವುದು, ಜನರ ಸಂಪ್ರದಾಯ, ಭಾವನೆಗಳನ್ನೇ ಬದಲಾಯಿಸಿ ರಾಷ್ಟ್ರೀಯ ಭಾವನೆಯನ್ನು ಸದಾ ಜಾಗ್ರತವಾಗಿರಿಸುವುದು, ಸಾಂಸ್ಕೃತಿಕ ರಂಗದಲ್ಲಿ ನಡೆದಿರುವ ಕ್ರಾಂತಿಗಳಾಗಿವೆ.

ವಿಶೇಷ ಲೇಖನ

ಇಷ್ಟೇ ಅಲ್ಲ, ಸಮಾಜವಾದೀ ಕಲಾವಿಕಾಸಕ್ಕೂ, ಸಾಹಿತ್ಯ ವಿಕಾಸಕ್ಕೂ, ನವಕಾರ್ಮಿಕರ ಸೃಷ್ಟಿಗೂ ಉಪಾಧ್ಯಾಯರುಗಳು, ಪತ್ರಿಕೋದ್ಯಮಿಗಳು, ಲೇಖಕರು, ಮಾರ್ಕ್ಸ್‌ವಾದಿಗಳು ಇವರನ್ನೆಲ್ಲ ಸಜ್ಜುಗೊಳಿಸುವುದೂ ಆಗಿದೆ.

'ಅಪ್-ಟು-ಡೇಟ್' ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಸಮಾಜವಾದೀ ಚೀನವನ್ನು ಕಟ್ಟಲು ಇರುವ ಕಾರ್ಯಕ್ರಮವಿದು. ಕಾರ್ಮಿಕರೆಲ್ಲರೂ ಸಮಾಜವಾದ, ಸಮತಾವಾದಗಳ ತಿಳುವಳಿಕೆ ಹೊಂದುವರಲ್ಲದೆ ಪ್ರತಿಯೊಬ್ಬರಿಗೂ ವಿಜ್ಞಾನ ಹಾಗೂ ಸಂಸ್ಕೃತಿಗಳ ಜ್ಞಾನ ದೊರೆಯಲವಕಾಶವನ್ನೀಯಲಾಗುವುದು.

ಇದಾಗದೆ ?

"ನಿಗದಿಯಾದ ಕಾಲದಲ್ಲಿ ಇದೆಲ್ಲ ಆಗದೆ?" ಎಂಬುದೊಂದು ಪ್ರಶ್ನೆ. 'ಆಗುತ್ತದೆ' ಎಂದು ಆ ಸಾಮಾನ್ಯ ನಿಯಮ ಹೇಳುತ್ತದೆ, ಈವರೆಗಿನ ಸಾಧನೆಗಳು 'ಆಗುತ್ತವೆ' ಎಂಬುದಕ್ಕೆ ಸ್ಪಷ್ಟ ಸಾಕ್ಷಿಗಳಾಗಿವೆ. ಈ ವರುಷದ ಅಭಿವೃದ್ಧಿಯ ವೇಗ ಪ್ರಥಮ ಪಂಚವಾರ್ಷಿಕ ಯೋಜನೆಯ ವರ್ಷಗಳಿಗಿಂತ ಹೆಚ್ಚು ತೀವ್ರವಾಗಿದೆ. 1953ರಲ್ಲಿ ಔದ್ಯೋಗಿಕ ಉತ್ಪತ್ತಿ ಶೇಕಡಾ 31·7 ರಷ್ಟು ಹೆಚ್ಚಿತು, 1955ರಲ್ಲಿ ವ್ಯವಸಾಯಿಕ ಉತ್ಪತ್ತಿಯಲ್ಲಿ ಶೇ. 17·7

ಲಾಗುವುದು. ಇದಿಷ್ಟೇ ಬ್ರಿಟಾನಿನ ಒಟ್ಟು ಕಬ್ಬಿಣ ಉತ್ಪತ್ತಿಯ ಒಂದು ಮೂರನೆಯ ಭಾಗವಾಗಿರುತ್ತದೆ!

ದೇಶಾದ್ಯಂತ ಸಹಸ್ರ ಸಂಖ್ಯೆಯಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳನ್ನು ಸ್ಥಾಪಿಸಲಾಗುತ್ತಿದೆ.

ಹೀಗೆ ಕಮ್ಯೂನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ಮುನ್ನಡೆಯುತ್ತಿರುವ ಚೀನದ 600 ಮಿಲಿಯ ಜನ ಮಾನವ ಕುಲಕ್ಕೆ ಈವರೆಗೆ ಗೊತ್ತಾಗಿರುವ ಉನ್ನತ ಸುಖ ಸೌಕರ್ಯಗಳನ್ನು ತಲುಪುತ್ತಿದೆ.

ಕಳೆದ ಎಂಟು ವರುಷಗಳ ಪುನರಾವಲೋಕನ ಮಾಡಿದರೆ ಇಡೀ ರಾಷ್ಟ್ರವೇ ಕಾರ್ಯೋನ್ಮುಖವಾಗಿರುವುದು ಕಂಡು ಬರುತ್ತದೆ. ಕೃಷಿ ಪ್ರಧಾನವಾದ ಈ ದೇಶದ ಕೃಷಿಯನ್ನು ಔದ್ಯೋಗಿಕ ಅಭಿವೃದ್ಧಿಯ ಸಮ ಹೆಜ್ಜೆಯಲ್ಲೇ ಮುನ್ನಡೆಸಲಾಗುತ್ತಿದೆ. ಬೇಸಾಯದ ತೀವ್ರ ಅಭಿವೃದ್ಧಿಯಾಗದೇ ಔದ್ಯೋಗಿಕ ಅಭಿವೃದ್ಧಿಯು ಆಗಲಾರದು ಎಂದು ಚೀನವು ಮನಗಂಡಿದೆ. ಅಂತೆಯೇ ಅದಕ್ಕೆ ವಿಶೇಷ ಗಮನವನ್ನಿತ್ತಿದೆ. ಇಂದು ಅಲ್ಲಿ 700,000 ಸಹಕಾರಿ ಬೇಸಾಯದ ಗುಂಪುಗಳಿವೆ.

ಆರನೂರು ಮಿಲಿಯ ಜನತೆಗೆ ಅನ್ನ, ಅರಿವೆ, ವಸತಿ, ವಿದ್ಯೆ, ಶಿಕ್ಷಣ, ಸಂಸ್ಕೃತಿಗಳಿಗೆ ಬೇಕಾದ ಅಗತ್ಯಗಳು ಬೃಹದಾಕಾರದಲ್ಲಿರುವುದು. ಆದರೆ ಮನುಷ್ಯನೇ ಭೌತಿಕ ಸಂಪತ್ತಿನ ಪ್ರಥಮ ಸೃಷ್ಟಿಕರ್ತ, ಮುಂಚೂಣಿಯಲ್ಲಿರುವ ನಾಯಕ, ಎಂದು ತನ್ನ ಜನ ಸಮೂಹಕ್ಕೆ ಅಗ್ರಪಟ್ಟ ಕಟ್ಟಿದ ಚೀನವು ಕಮ್ಯೂನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ಅಗಾಧವಾದ ಕಾರ್ಯಗಳಲ್ಲಿ ತೊಡಗಿದೆ. ಚೀನದ ಈ ಅಭಿವೃದ್ಧಿ ಲೋಕದ ಸಮಾಜವಾದೀ ಶಿಬಿರಕ್ಕೆ ದೊಡ್ಡದೊಂದು ಬಲವಾಗಿದೆ, ಬೆಂಬಲವಾಗಿದೆ. ವಿಶ್ವಶಾಂತಿ ಶಕ್ತಿಗಳಲ್ಲಿ ಒಂದಾಗಿದೆ. ಇದಕ್ಕೆ ನಾವು ಯಶಸ್ಸು ಕೋರುತ್ತೇವೆ.

ಕೆಂಪು ಚೀನಾ ಜಿಂದಾಬಾದ್ !
ಹಿಂದೀ ಚೀಣಿ ಭಾಯಿ ಭಾಯಿ !!

ಕಥಾ ಚಿತ್ರ

ಯಾರಿಗೂ ಕಾಣಿಸದು!

ಕೆ. ಪುಟ್ಟಸ್ವಾಮಿ, ನೀಲಗಿರಿ

ಆತ ಬರಿಯ ಕತೆಗಾರ ಮಾತ್ರವಲ್ಲ– ರಿದ್ರ ಕತೆಗಾರ!

ಆತನ ಸಿರಿ ಸಂಪಾದನೆ, ಆದರ್ಶತ್ವಗಳೆ ವೂ, ಯಾರಿಗೂ ಗೋಚರಿಸದ, ಕಲ್ಪ ಯ ಗಗನ ಕುಸುಮಗಳು. ಆಶಾಕಿರ ದ ಕನಸುಗಳು.

ವ್ಯಕ್ತಿಯಾದರೂ ಅಷ್ಟೆ. ಇಂಗಿದ ಕೆನ್ನೆ ಣ್ಣುಗಳು; ಮುಖದ ತುಂಬ ಮುಳ್ಳುಗಿ ದಂತೆ ಬೆಳೆದುನಿಂತ ಒರಟುಗೂದಲು, ದಂದ ತಲೆ! ವ್ಯಕ್ತಿತ್ವವೋ ಎಲ್ಲರಿಗೂ ಚಿತ್ರವೆಂದು ತೋರಿಸುವಂಥಾದ್ದು. ತ ಸದಾ ಸೋಮಾರಿ. ಹುಚ್ಚನಂತೆ ನಾದರೂ ಚಿಂತಿಸುತ್ತಾನೆ; ಏನಾದರೂ ಚುತ್ತಾನೆ. ತನ್ನ ಪಾತ್ರಗಳೊಡನೆ ಡಿ–ವಿಡಿಗೊಳ್ಳುತ್ತಾನೆ. ಒಮ್ಮೊಮ್ಮೆ —ಆದರೆ ಭಾವನೆಯೋ ಹಿರಿದಂತೆ. ಶಾಲವಂತೆ! ಜಗತ್ತನ್ನೆ ತನ್ನ ಹೃದಯ ದಲ್ಲಿಟ್ಟುಕೊಂಡು—ಮಗುವನ್ನು ಮುದ್ದಿಸುವ ತಾಯಿಯಂತೆ—ನೇವರಿಸ ಬಯಸುತ್ತಾನೆ. ತನ್ನ ಹೃದಯ ಭೂಮಂಡಲಕ್ಕೂ ಹೆಚ್ಚು ವಿಶಾಲವೆಂದು ಭಾವಿಸುತ್ತಾನೆ.

ಇನ್ನೂ ಕೆಲವರಿಗೆ ಆತ ಬ್ರಹ್ಮನೆಂಬ ಭಾವನೆ! ಆತನಿಗೂ ಅಷ್ಟೆ; ತನ್ನ ಕಥಾ ಸೃಷ್ಟಿಯ ಬಗ್ಗೆ ಹೆಮ್ಮೆಯುಂಟು. ಕೆಲವರು ಆತನ ಕತೆಗಾಗಿ ಹಾತೊರೆಯುತ್ತಾರೆ. ಆತನ ಕತೆಯಲ್ಲಿ; ಕಥಾರಚನೆಯಲ್ಲಿ; ಕತೆಗಳಲ್ಲಿ ತುಂಬುವ ಭಾವನೆಗಳಲ್ಲಿ, ನವ ಚೈತನ್ಯವನ್ನು ಕಾಣುತ್ತಾರೆ. ಸಮಾಜದ ದುಷ್ಕೃತ್ಯಗಳನ್ನು ಬಿಚ್ಚಿ ತೋರಿಸುವ ಆತನ ಎದೆಗಾರಿಕೆಗೆ ಮೆಚ್ಚಿಕೊಳ್ಳುತ್ತಾರೆ. ಕೃತಜ್ಞತೆ ಸೂಚಿಸುತ್ತಾರೆ; ಹೊಗಳುತ್ತಾರೆ! ಬರಿಯ ಹೊಗಳಿಕೆ ಯಾಕೆ ಬೇಕು!

ಪ್ರಸ್ತುತ, ಕತೆಯಲ್ಲಿ ಬರುವ ಕತೆಗಾರನೂ ಅಂತೆಯೇ! ಕತೆಗಾರನಾದರೆ ಸ್ವರ್ಗ ಸುಖ ಸಿಕ್ಕುತ್ತದೆಂದು ಆತ ಭಾವಿಸಿರಲಿಲ್ಲವಾದರೂ, ಆತನ ವಿದ್ಯಾಭ್ಯಾಸ; ವಾತಾವರಣ; ಹಾಗೂ ಸಮಾಜದ ಮೇಲಿನ ಆತನ ಅನುತಾಪ ಆತನನ್ನು ಕತೆಗಾರನಾಗುವಂತೆ ಮಾಡಿವು.

ಆತನ ಕತೆಗಾರ ಜೀವನ ಪ್ರಾರಂಭವಾದ ಬಗೆ ಹೀಗೆ: ಮೊದಲು ಸಮಾಜದ ಅನ್ಯಾಯಗಳನ್ನು ಕಂಡು ಭಾವಾವೇಶಗೊಂಡು ಒಂದೆರಡು ಕತೆ ಬರೆದು ಪತ್ರಿಕೆಗಳಿಗೆ ಕಳುಹಿಸಿದ. ಒಂದೆರಡು ತಿಂಗಳಾದ ಮೇಲೆ ಅವು ಪ್ರಕಟವಾದವು. "ಉತ್ತಮ ಕತೆಗಾರನಾಗುವ ಭವಿಷ್ಯ"ವನ್ನು ಸಂಪಾದಕರುಗಳು ಸೇರಿಸಿದ್ದರು. ಆತನಿಗೆ ಉಂಟಾದ ಆನಂದ ಮತ್ತೆ ಎಂದಿಗೂ ದೊರಕಲಾರದ ಆನಂದವಾಗಿತ್ತು.

ಅನಂತರವೂ ಬರೆಯ ತೊಡಗಿದ. ಈ ಸಲವೂ ಅಷ್ಟೆ. ಅನೇಕರ ಹೊಗಳಿಕೆಗೆ ಪಾತ್ರನಾದ. ಮತ್ತೆ ಬರೆಯತೊಡಗಿದ; ಬರೆಯುವುದರಲ್ಲಿ ಒಂದು ಬಗೆಯ ಮಾನಸಿಕ ತೃಪ್ತಿಯನ್ನು ಕಂಡ. ಬರೆಯತೊಡಗಿದ. ತನಗಿನ್ನು ಬರೆಯುವುದರಲ್ಲೇ ಮುಕ್ತಿಯೆಂದು ಭಾವಿಸತೊಡಗಿದ. ತನ್ನ ಜೀವನವನ್ನೇ ಸಾಹಿತ್ಯ ದೇವಿಗೆ ಮೀಸಲಾಗಿರಿಸುವೆನೆಂಬ ಹಟತೊಟ್ಟ.

ಕತೆಗಾರನಾಗಿ ಬರೆಯುವುದರಲ್ಲಿ ಆತ್ಮತೃಪ್ತಿಯನ್ನು ಕಂಡ; ಹೊಟ್ಟೆಯೆಂಬುದೊಂದಿದೆಯೆಂಬುದನ್ನು ಮರೆತೇ–ಮರೆತ. ಒಮ್ಮೆ ಹಸಿವು ಹೆಚ್ಚಿದಾಗ ಹೊಟ್ಟೆಯ ನೆನಪು ಬಂತು. ಕಲ್ಪನಾ ಲೋಕದಿಂದ ಇಳಿಗಿಳಿದ. ಇಲ್ಲಾದರೋ 'ಕಾಯಕವೇ ಕೈಲಾಸ'. ಆದರೆ ತಾನು ಮಾಡುತ್ತಿರುವುದು ಕಾಯಕವಲ್ಲವೆ? ಅಂತಾದರೇಕೆ ಹೊಟ್ಟೆ ತುಂಬಲಿಲ್ಲವಾಗಿದೆ? ಜಗತ್ತಿನಲ್ಲಿ ಬಾಳಬೇಕಾದರೆ, ಯಾವುದಾದರೂ ಉದ್ಯೋಗವನ್ನವಲಂಬಿಸಬೇಕು! ತಾನು ಮಾಡುತ್ತಿರುವ—ಮಾಡುತ್ತಿದ್ದ— ಬಹು ಸೃಷ್ಟಿಯಿಂದ ಓದುಗರ ಮೆಚ್ಚಿಕೆಗೆ ಪಾತ್ರನಾಗಬಹುದು; ಬಾಯಿಮಾತಿನಲ್ಲಿ ಹೊಗಳಿಸಿಕೊಂಡು ಹೃದಯವನ್ನು ತುಂಬಿಸಿಕೊಳ್ಳಬಹುದು—ಆ ಹೊಗಳಿಕೆಯಿಂದ ಹೊಟ್ಟೆ ತುಂಬದೆಂದು ಆತನ ಅನುಭವಕ್ಕೆ ಬಂದಿತ್ತು.

ಇನ್ನು ಉದ್ಯೋಗದ ಬೇಟೆ. ಉದ್ಯೋಗವಾದರೂ ತಾನೀವರೆಗೆ ಕಲಿತ ವೃತ್ತಿಗೆ ಹೊಂದಿಕೊಂಡದ್ದಾಗಿರಬೇಕು. ಬೇರೆ ಕೆಲಸಗಳು ಒಗ್ಗವು. ತನ್ನ ಆದರ್ಶ; ಕತಾಪ್ರಪಂಚ ಇಷ್ಟು ಬೇಗ ಕೊನೆಗಾಣಬಾರದೆಂಬ ಹುಚ್ಚು ಹಂಬಲವಂತೂ ಈ ತನನ್ನು ಬಿಟ್ಟಹಾಗಿಲ್ಲ.

ಅದಕ್ಕಾಗಿ ಕೆಲವಾರು ಹಿರಿಯರಿಗೆ—ತನ್ನ ವೃತ್ತಿಯಲ್ಲಿ ನುರಿತವರಿಗೆ—ಬೇಡಿಕೆಯ ಅರ್ಜಿಗಳನ್ನು ಸಲ್ಲಿಸಿದ. ಎಲ್ಲರಿಂದಲೂ ಮುದ್ದಾಗಿ ತಪ್ಪಿಸಿಕೊಳ್ಳುವ ಉತ್ತರ. ವಿಷಾದ ವ್ಯಕ್ತಪಡಿಸುವಿಕೆ!

ಆದರೂ ಕತೆಗಾರ ಆಶಾಜೀವಿಯಲ್ಲವೆ? ಇಂದಿಲ್ಲದಿದ್ದರೆ ನಾಳೆ; ಸೋಲು ಗೆಲುವಿನ ಮೆಟ್ಟಲು. ಇಂದಿನ ಕಷ್ಟ ಮುಂದಿನ ಸುಖಕ್ಕೆ ಬುನಾದಿ........ಇನ್ನೂ ಎಷ್ಟೋ ಭಾವನೆಗಳು.

ಮೊಖ್ತ ಸಂಧಿಸಿದರೆ ತನಗೆ ಉದ್ಯೋಗ ದೊರಕಬಹುದೆಂಬ ಹುಚ್ಚು ಹಿಡಿಯಿತು. ಆದರೆ ತಾನು ಸಂಧಿಸಬೇಕಾದವರು ದೂರದ ಊರುಗಳಲ್ಲಿದ್ದಾರೆ. ಪ್ರಯಾಣದ ಖರ್ಚಿಗಾದರೂ ಕಾಸುಬೇಡವೆ? ತನ್ನ ಕಲ್ಪನಾ ಜಗತ್ತಿನಲ್ಲಾಗಿದ್ದರೆ, ಪಾಂಟಿಯಾಕ್ ಕಾರಿರಲಿ, ರಾಕೆಟ್ಟನಲ್ಲೂ ಹೋಗಬಲ್ಲ. ಅಲ್ಲಿನವರು ಈ ಕತೆಗಾರನನ್ನು ಸರ್ವ ಮರ್ಯಾದೆಯಿಂದ ಕರೆದೊಯ್ಯುತ್ತಾರೆ! ಆದರೆ ಈ ಜಗತ್ತಿನವರೋ ತುಂಬಾ ಕ್ರೂರಿಗಳು ಹಾಗೂ ಹೃದಯವಿಲ್ಲದವರು—ಕತೆಗಾರನಿಗೆ ಈ ಗತಿಯೊದಗಿದಾಗ!

ತಾನು ಈವರೆಗೆ ಸಂಗ್ರಹಿಸಿಟ್ಟಿದ್ದ ಪತ್ರಿಕೆ ಪುಸ್ತಕಗಳ ರಾಶಿಯ ಕಡೆ ಗಮನ ಹರಿದಾಗ ಕತೆಗಾರನ ಹೃದಯ ಆನಂದದಿಂದ ಕುಪ್ಪಳಿಸಿತು; ಆದರೆ ಅದೇ ಹೃದಯದ ಮತ್ತೊಂದು ಮೂಲೆಯಲ್ಲಿ ಕಿಚ್ಚುಹೊತ್ತಿಸಿದಂತಾಗಿತ್ತು. ಆತನ ಸಂಗ್ರಹಿತ ಸಾಹಿತ್ಯವನ್ನು ಮಾರುವಾಗಲೇ ಈ ಜಗತ್ತನ್ನು ಆತ ಕ್ರೂರಿಗಳ ಸಂತೆಯೆಂದು ಭಾವಿಸಿದ. ಯಾಕೆಂದರೆ ಅವನ್ನು ಕೊಂಡುಕೊಳ್ಳುವವನು 'ಹಳೆ ಕಾಗದ'ದ ಬೆಲೆಗೆ ತಾನೆ ಅದನ್ನು ಕೊಳ್ಳಲು ಸಾಧ್ಯ?

ಆಯಿತು. ಇನ್ನು ರೈಲು ಪ್ರಯಾಣದ ಪ್ರಾರಂಭ. ಅಲ್ಲಿನ ಪ್ರಯಾಣಿಕರನ್ನು; ಹಾಗೂ ನವಯುವತಿಯರನ್ನು ನೋಡಿ

(೬ನೇ ಪುಟ ನೋಡಿ)

ನೀವೇನು ಹೇಳುತ್ತೀರಿ?

ಐ. ಸಿ. ಎಸ್. ಅಧಿಕಾರಿ ಕಲಿತುದೇನು?

ಬೆಂಗಳೂರಿನ ಶ್ರೀ ಆರ್. ಕೆ. ರಾಮ ಧ್ಯಾನಿ ಐ. ಸಿ. ಎಸ್. ಮಹಾನುಭಾವರು ಕೇಂದ್ರದ ವಾರ್ತಾ ಶಾಖೆಯ ಕಾರ್ಯದರ್ಶಿಗಳಾದ ಬಳಿಕ ಮಾಡಿದ ಕಸರತ್ತು ಏನು? ವಾರ್ತಾ ಪತ್ರಿಕೆಗೆ ಲೇಖನ ಬರೆಯುತ್ತ ಕಮ್ಯೂನಿಸ್ಟ್ ಪಾರ್ಟಿಯನ್ನು ಟೀಕಿಸಿ ಮೊಸರು ಒಣಹಾಕಿ ಜಗಳ ತೆಗೆ ದ ಮುದುಕಿಯ ಕಾರ್ಯ! ಅಮೃತ ಬಜಾರ್' ಪತ್ರಿಕೆಯಲ್ಲಿ (ಆಗಸ್ಟ್ 15, ಕನ್ನಡದಲ್ಲಿ 'ಪ್ರಜಾವಾಣಿ') ಲೇಖನ ಗೀಚುತ್ತ ಪ್ರಜಾಪ್ರಭುತ್ವ ತತ್ವದ ಪಂಡಿತರಾಗಿ "ಕಮ್ಯೂನಿಸ್ಟ್ ಪಾರ್ಟಿ ಕೈಗೆ ಅಧಿಕಾರ ಬಂದರೆ ಅದು ಇಲ್ಲಿಯೇ ಉಳಿಯುವುದೋ ಅಥವಾ ಮಾಸ್ಕೋವಿಗೆ ತೆರಳುವುದೋ" ಎಂದರು. ಸ್ವತಃ ನೆಹ್ರೂರವರೇ ಈ ಬರಹದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸ್ವಾತಂತ್ರ್ಯ ಬಂದ ಬಳಿಕ ಐ. ಸಿ. ಎಸ್. ಅಧಿಕಾರಿಯೊಬ್ಬ ರಾಜಕೀಯ ಪಕ್ಷಗಳನ್ನು ಟೀಕಿಸುವ ಪ್ರಥಮ ಅಧಿಕಾರಿಯಾಗಿ ಮೊದಲ ಮಣೆಯನ್ನೇರಿದ ಈ ಮಹಾನುಭಾವರ ನಡತೆ ಸಿವಿಲ್ ಸರ್ವೀಸ್ ಕಂಡಕ್ಟ್ ರೂಲನ್ನು ಹಿಂಸೆಗೊಳಪಡಿಸಿದ್ದಾಗಿದೆ. ಸರಕಾರದ ಸೇವಕನೊಬ್ಬನು—ಅಧಿಕಾರದಲ್ಲಿ ಯಾವುದೇ ಪಕ್ಷವಿರಲಿ—ರಾಜಕೀಯ ಪಕ್ಷಗಳ ಉಸಾಬರಿ ಹಚ್ಚಿಕೊಂಡು ಮಾಡಬೇಕಾದುದೇನಿದೆ? ಇವರೇ "ಕಾಂಗ್ರೆಸ್ ಸರ್ಕಾರ ಗಾಂಧೀವಾದದಿಂದ ಗೂಂಡಾವಾದಕ್ಕೆ ಹೊರಳಿದೆ" ಎಂದು ಟೀಕಿಸಿದ್ದರೆ ಆಳುವ ಕಾಂಗ್ರೆಸ್ಸು ಇವರನ್ನು ದಂಡಿಸದೆ ಸುಮ್ಮನೆ ಬಿಡುತ್ತಿತ್ತೇ? ಸರ್ಕಾರದ ಕೆಲಸವೊಂದೇ ಸರ್ಕಾರಿ ಸೇವಕನ ಕಾರ್ಯವಿನಃ ಪಕ್ಷ ರಾಜಕಾರಣವಲ್ಲ ಎಂಬುದು ಒಂದು ಸರ್ವಮಾನ್ಯ ನೀತಿ, ನಿಯಮ, ವಿಧಿ.

ಶ್ರೀ ರಾಮಧ್ಯಾನಿಯವರ ಈ ನಡವಳಿಕೆಯಲ್ಲಿ ದೂರ ಫರಿಣಾಮದ ಲಕ್ಷಗಳಿವೆ. ಸರಕಾರ ಈ ವಿಚಾರದಲ್ಲಿ ನಿಷ್ಪಕ್ಷಪಾತತನ ತೋರಿಸಿಲ್ಲ. ಇದರಲ್ಲಿ ದ್ವಿಮುಖ ನೀತಿಯನ್ನನುಸರಿಸಿದೆ ಎಂಬುದು ಸ್ಪಷ್ಟವಾಗುತ್ತದೆ.

ಇವರಾವ ಬಾಯಿಯಲ್ಲಿ ಹೇಳಿದರು?

ಕೇರಳ ಸರಕಾರದ ಬಗ್ಗೆ ಕೆಟ್ಟ ಅಪಪ್ರಚಾರದ ಕೆಸರನ್ನು ಚಿಮ್ಮಿ ಸ್ಥಳೀಯ ಹಾಗೂ ಹೊರಗಿನ ಕಾಂಗ್ರೆಸ್ಸಿಗರು ಬಿಳಿಯದನ್ನು ಕಪ್ಪೆಂದು ಸಾಧಿಸುತ್ತಿರುವ ಸುಳ್ಳು ನಾಟಕ ಈಗಾಗಲೇ ಜನತೆಗೆ ಬೇಕಾದಷ್ಟು ತಿಳಿದಿದೆ. ಕೇರಳ ಕಾಂಗ್ರೆಸ್ಸಿಗರ ಬಾಯಂತೂ ಬರೀ ಈ ಹೊಲಸಿನಿಂದಲೇ ತುಂಬಿದೆ. ಈ ಕಾಂಗ್ರೆಸ್ಸಿಗರಲ್ಲಿ ಶ್ರೀ ಕೆ. ಪಿ. ಮಾಧವನ್ ನಾಯರರೂ ಒಬ್ಬರಿದ್ದಾರೆ. ಇವರ ಬಗ್ಗೆ ಇಲ್ಲಿ ಹೇಳುವ ವಿಚಾರ ಮಾತ್ರ ಬೇರೆಯಾಗಿದೆ.

ಕೆ. ಪಿ. ಮಾಧವನ್ ನಾಯರ್ ಕನ್‌ಸ್ಟ್ರಕ್ಟಿವ್ ವರ್ಕರ್ಸ್ ವಿಂಗ್ ಆಫ್ ಆಲ್ ಇಂಡಿಯಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳು. ಇವರು ಹೈದರಾಬಾದಿನ (ಆಂಧ್ರ) ಗಾಂಧೀ ಭವನದಲ್ಲಿ ರಚನಾತ್ಮಕ ಕೆಲಸಗಾರರನ್ನುದ್ದೇಶಿಸಿ ಮಾತನಾಡುತ್ತ ಕೇರಳದಲ್ಲಿಯ ಈಗಿನ ಸರ್ಕಾರವು ಸಹಕಾರಿ ಆಂದೋಳನಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದ್ದು ಕಾರ್ಮಿಕರ ಸಹಕಾರ ಸಂಘಗಳು ಪಿ. ಡಬ್ಲ್ಯು. ಡಿ. ಹಾಗೂ ಮತ್ತಿತರ ರಚನಾತ್ಮಕ ಕಾರ್ಯಗಳೊಂದಿಗೆ ತುಂಬ ಸಹಕಾರ ನೀಡಿ ಕಾರ್ಯಗಳನ್ನು ತೀವ್ರವಾಗಿ ಯಶಸ್ವಿಗೊಳಿಸುತ್ತಿವೆಯೆಂದು ಹೇಳಿದರು. "ಇದೊಂದು ಉತ್ತಮ ಹೆಜ್ಜೆ. ಇದರಿಂದ ಹೆಚ್ಚು ಜನರಿಗೆ ಉದ್ಯೋಗ ದೊರೆಯಲು ದಾರಿಯಾಗಿದೆ, ಕಾರ್ಮಿಕರು ನೇರವಾಗಿ ಲಾಭದಲ್ಲಿ ಪಾಲುದಾರರಾಗಿದ್ದಾರೆ, ದಲ್ಲಾಳಿತನವನ್ನು ಹೊರತಳ್ಳಲಾಗಿದೆ" ಎಂದೂ ಅವರು ಹೇಳಿದ್ದಾರೆ. ಇಂಥ ಕಾರ್ಯಗಳು ಜನರ ಪ್ರೀತಿಗೆ ಪಾತ್ರವಾಗಿದ್ದು ಅವರು ಸರಕಾರಕ್ಕೆ ಇನ್ನೂ ಹತ್ತಿರವಾಗುವಂತೆ ಮಾಡಿವೆ ಎಂದೂ ಅವರ ಅಭಿಪ್ರಾಯ.

ಕೇರಳದಲ್ಲಿ ಜನರ ವಿತ್ತ ಜೀವಿತಕ್ಕೆ ಅಭದ್ರ ಪರಿಸ್ಥಿತಿಯೊದಗಿದೆಯೆಂದು ಕೂಗುವ ಕಾಂಗ್ರೆಸ್ಸಿಗರಿಗೂ ಈ ಕಾಂಗ್ರೆಸ್ಸಿಗರಿಗೂ ಇರುವ ಬಾಯಿಯೊಂದೇ ಆದರೂ ಕಾಂಗ್ರೆಸ್ ಡಿಸ್ಟ್ರಕ್ಟಿವ್ (ವಿಧ್ವಂಸಕ) ಜನಗಳನ್ನು ಬೆಳಕಿಗೆ ತರಲು ಇರುವ ಕನ್ನಡಿಯೂ ಅವರಲ್ಲೇ ಇದೆ ಅಲ್ಲವೆ?

ಓ ಅದೇ? ಮನೆಯ ಜಗಳ!

ನಮ್ಮ ಪ್ರಧಾನಿಯಿಂದ ಹಿಡಿದು ಕೆಳಗಿನ ಜವಾನರವರೆಗೂ ಕೇರಳದಲ್ಲಿಯ 'ರಾಜಕೀಯ ಕೊಲೆಗಳ' ಬಗ್ಗೆ ಮಾತನ್ನಾಡುವವರೆ. ಅರ್ಥಾತ್ ಇಂಥ ಕನಸುಗಳನ್ನು ಕೂಡ ಕಾಂಗ್ರೆಸ್ಸಿಗರ ಅಹಿಂಸಾ ರಾಜ್ಯದಲ್ಲಿ ಕಾಣುವುದು ಸಾಧ್ಯವಿಲ್ಲ. ಅಂತೆಯೇ ಅವು ಪತ್ರಿಕೆಗಳಲ್ಲಿ ದೊಡ್ಡದಾಗಿ ಯಾಕೆ, ಪ್ರಕಟವೇ ಆಗುವುದಿಲ್ಲ! ಆಂಧ್ರದಲ್ಲಿಯ ಇಬ್ಬರು ಮಾಜೀ ಮಂತ್ರಿಗಳು ಸ್ವತಃ ಕಾಂಗ್ರೆಸ್ ಹೈಕಮಾಂಡ್‌ಗೆ ತಮ್ಮ ರಾಜ್ಯದಲ್ಲಿ ಕಾಂಗ್ರೆಸ್ ಆಳ್ವಿಕೆಯಲ್ಲಿ ನಡೆದಿರುವ ೨೨ ರಾಜಕೀಯ ಕೊಲೆ

(೯ನೇ ಪುಟ ನೋಡಿ)

ಸೇವಕ

ನರ ತನ್ನ
ನಿನ್ನ
ಒಣ ದಂಟ
ನರೆವ
ನಿನ್ನ ಪಾಲಿ
ಹಾಲೆಲ್ಲಿ, ಬ
ಹಸಿವೆ
ಕರೆದೆ
"ಹೂಂ" ಎ
ನಿನ್ನ

ಭೂಮಿ ತಿರ
ಮತ್ತೆ
ತಿನ್ನ ತೊಡ
ಹುಲ್ಲ
ಸಮಯ ಗ
ಯಾದ
ದುಡಿಯ ತಿ
ನೊಗ
ಹಾಕಿದರೆ,
ತಿಂದು
ನಿನ್ನಿರವ ನಿ
ಆಯ್ತು

ನೀ ಬಹ್ಮಚ
ದರೆಯ
ಕಲ್ಲು ಒಣಿಕ
ಆ ಗ
ಮುಪ್ಪಾದರು
ಬಂದ
ಕಾಲು ಕುಸ
ಬಿಡಲ
ಬಡಿತ ತಾಳ
ಮೇಲ
ಮೊರೆ ಇಟ್ಟೆ
"ಒಯ

ನಿನ್ನ ಮೊರೆ
ದೇವ
ತೆರಳ್ವೆ ಅಲ್ಲಿ
ಕಟು
ಸೇವಕನ
ನಾನ
ನೋಡೆ ದಿ
ಒಡೆ

—ಜಿ.

ಚುಟುಕ

ರಾಗ–ದೀಪಕ

ಅಂಧಕಾರವೆ ಅ
ಭಾರತಿಯ
ಭಾರತಿಯು ನಲಿ

ರಾಗ–ದೀಪಕ

ಸೋವಿಯತ್ ರಷ್ಯಾದಲ್ಲಿ

ಜನರು ವಾಸಿಸುವ ಮನೆಗಳು

[ಸೋವಿಯೆತ್ ನಾಗರಿಕರು ಬಾಡಿಗೆಗೆ ಮನೆಗಳನ್ನು ಪಡೆಯುವುದಕ್ಕೆ ಇರುವ ಪರಿಸ್ಥಿತಿಗಳು, ಬಾಡಿಗೆಯ ಹಣ, ಸಂಸಾರದ ಖರ್ಚಿನಲ್ಲಿ ಮನೆ—ಬಾಡಿಗೆಯ ಪ್ರಮಾಣ, ಖಾಸಗೀ ನಿವಾಸವನ್ನು ಕಟ್ಟಿಕೊಳ್ಳಲು ನಿವೇಶನಕ್ಕೆ ಕೊಡಬೇಕಾದ ಬಾಡಿಗೆ—ಇವುಗಳ ಬಗ್ಗೆ ಈ ಕೆಳಗೆ ಒಂದು ಲೇಖನವನ್ನು ಪ್ರಕಟಿಸುತ್ತಿದ್ದೇವೆ.]

ಕೊನೆಗಾಣದ ಭೋಗ್ಯಪತ್ರ

ಸೋವಿಯತ್ ಒಕ್ಕೂಟದ ನಗರಗಳಲ್ಲಿ ಜನತೆಯ ವಸತಿಯ ಬಹುಭಾಗವು ಸರಕಾರಕ್ಕೆ ಸೇರಿರುತ್ತದೆ. ರಾಜ್ಯದ ಒಡೆತನಕ್ಕೆ ಸೇರಿದ ನಿವಾಸಗಳನ್ನು ಬಾಡಿಗೆದಾರನ ಮತ್ತು ಗೃಹಾಡಳಿತ ವ್ಯವಸ್ಥೆಯ ಕಚೇರಿಯ ಮಧ್ಯೆ ಮಾಡಿಕೊಳ್ಳಲಾಗುವ ಕರಾರು ಪತ್ರಗಳ ಪ್ರಕಾರ ಬಾಡಿಗೆಗೆ ಕೊಡಲಾಗುತ್ತದೆ. ಭೋಗ್ಯ ಪತ್ರದ ಅವಧಿಯು ಮುಗಿಯಿತೆಂಬ ಕಾರಣದಿಂದ ಬಾಡಿಗೆ ಕರಾರು ಪತ್ರವನ್ನು ಕೊನೆಗಾಣಿಸುವ ಹಕ್ಕು ಗೃಹಾಡಳಿತ ವ್ಯವಸ್ಥೆಯ ಕಚೇರಿಗೆ ಎಷ್ಟು ಮಾತ್ರವೂ ಇಲ್ಲ, ಬೇರೆ ಮಾತುಗಳಲ್ಲಿ ಹೇಳುವುದಾದರೆ, ರಾಜ್ಯದ ಒಡೆತನಕ್ಕೆ ಸೇರಿದ ವಸತಿಯಲ್ಲಿ ವಾಸಿಸುವ ಜನರು ಎಂದಿಗೂ ಕೊನೆಗಾಣದ ಶಾಶ್ವತ ಭೋಗ್ಯ ಪತ್ರದ ಸೌಕರ್ಯವನ್ನು ಹೊಂದಿರುತ್ತಾರೆ.

ಇದಲ್ಲದೆ, ಬಾಡಿಗೆದಾರರು ತಮ್ಮ ವಸತಿಯ ಭಾಗವನ್ನು ಬೇರೆಯವರಿಗೆ ಬಾಡಿಗೆಗೆ ಕೊಟ್ಟುಕೊಳ್ಳುವ ಹಕ್ಕನ್ನು ಕೂಡ ಕರಾರು ಪತ್ರದಲ್ಲಿ ಬಾಡಿಗೆದಾರರಿಗೆ ಕೊಡಲಾಗುತ್ತದೆ. ಬಾಡಿಗೆದಾರನು ಬಾಡಿಗೆಗೆ ತೆಗೆದುಕೊಳ್ಳುವ ವಸತಿಯ ಮೇಲೆ ಬಾಡಿಗೆದಾರನ ಕುಟುಂಬದ ಸದಸ್ಯರಿಗೂ ಸಮಾನ ಹಕ್ಕುಗಳಿರುತ್ತವೆ.

ಬಾಡಿಗೆಯಲ್ಲಿ ಹೆಚ್ಚಳವೇ ಇಲ್ಲ !

ಸೋವಿಯೆತ್ ನಾಡಿನಲ್ಲಿ ಮನೆ ಬಾಡಿಗೆಯು ಸುಸ್ಥಿರವಾದುದು. ಇದರ ತಳಹದಿಯನ್ನು ೧೯೨೬ರಲ್ಲಿ ಸ್ಥಾಪಿಸಲಾಯಿತು. ಅಂದಿನಿಂದಲೂ,—ಜೀವನ ಪರಿಸ್ಥಿತಿಗಳು ಗಣನೀಯ ಪ್ರಮಾಣದಲ್ಲಿ ಬದಲಾವಣೆಯನ್ನು ಹೊಂದಿವೆಯಾದರೂ ಕೂಡ,-ಬಾಡಿಗೆಗಳು ಮಾತ್ರ ಸ್ವಲ್ಪವಾದರೂ ಹೆಚ್ಚಿಲ್ಲ, ಮನೆಗಳು ಹೆಚ್ಚು ಹೆಚ್ಚು ಸುಖ ವಸತಿ ಸೌಕರ್ಯಗಳನ್ನು ಪಡೆದಿವೆ. ಅವುಗಳಿಗೆ ಎಲ್ಲಾ ಆಧುನಿಕ ಸೌಕರ್ಯಗಳನ್ನು ಒದಗಿಸಲಾಗಿದೆ. ಇವುಗಳಿಂದ ನಿರ್ಮಾಣದ ಮತ್ತು ನಿರ್ವಹಣೆಯ ವೆಚ್ಚವು ಸ್ವಾಭಾವಿಕವಾಗಿಯೇ ಹೆಚ್ಚುತ್ತದೆಯೆಂಬುದು ನಿಜ. ಹೀಗಿದ್ದೂ ಕೂಡ ಬಾಡಿಗೆಗಳು ಮಾತ್ರ ಹೆಚ್ಚಿಲ್ಲ! ರಾಜ್ಯದ ಒಡೆತನಕ್ಕೆ ಸೇರಿದ ಮನೆಗಳು ಯಾವ ಬಗೆಯ ಲಾಭವನ್ನಾದರೂ ಪಡೆಯುವುದಕ್ಕಾಗಿ ಉದ್ದೇಶಿಸಲ್ಪಟ್ಟಿಲ್ಲ. ಬಾಡಿಗೆಯಿಂದ ಬರುವ ಹಣದಲ್ಲಿ ಶೇಕಡ ೬೮ ಪಾಲಿನಷ್ಟು ಹಣವನ್ನು ಪ್ರಚಲಿತ ದುರುಸ್ತಿಗಳಿಗಾಗಿಯೂ, ನಿರ್ವಹಣೆಗಾಗಿಯೂ ಬಳಸಲಾಗುತ್ತದೆ. ಮಿಕ್ಕ ಶೇಕಡ ೩೨ರಷ್ಟು ಹಣವನ್ನು ವಿಮೆಯ ಕಂತಿಗಾಗಿ ಸಲ್ಲಿಸಲಾಗುತ್ತದೆ. ಪ್ರಧಾನ ರೂಪದ ದುರುಸ್ತಿಗಳನ್ನು ರಾಜ್ಯವು ತನ್ನ ಖರ್ಚಿನಿಂದಲೇ, ಬಾಡಿಗೆದಾರರಿಗೆ ಯಾವ ಬಗೆಯ ಇತರ ಅಧಿಕ ಖರ್ಚನ್ನೂ ಹೇರದೆಯೇ ನಡೆಸಿಕೊಡುತ್ತದೆ.

ಅನೇಕ ಸಂದರ್ಭಗಳಲ್ಲಿ ಬಾಡಿಗೆಯು, ನಿರ್ವಹಣೆಯ ಖರ್ಚುಗಳಿಗೆಲ್ಲಕ್ಕೂ ಸರಿಹೋಗದಿರುವುದು ಕೂಡ ಉಂಟು. ಅಂತಹ ಸಂದರ್ಭದಲ್ಲಿ ನಿರ್ವಹಣೆಗೆ ಸಾಲದಿರುವ ವೆಚ್ಚವನ್ನು, ನಗರಾಭಿವೃದ್ಧಿಯ ಸಲುವಾಗಿ ರಾಜ್ಯವು ನಿಗದಿಗೊಳಿಸಿರುವ ನಿಧಿಗಳಿಂದಾಗಲೀ, ಅಥವ ವಾಸಸ್ಥಳವೆಂದು ಪರಿಗಣಿಸಲಾಗದಿರುವ ಕಟ್ಟಡ ಭಾಗಗಳನ್ನು ಅಂಗಡಿಗಳು, ಉಪಾಹಾರ ಭವನಗಳು, ಚಿಪ್ಪಿಗರ ಸಂಸ್ಥೆಗಳು, ಇತ್ಯಾದಿಗಳಿಗಾಗಿ ಬಳಸುವ ರಾಜ್ಯ—ಸಂಘಟನೆಗಳಿಗೆ ಬಾಡಿಗೆಗೆ ಕೊಡುವುದರ ಮೂಲಕವಾಗಲೀ, ತುಂಬಿಸಿಕೊಳ್ಳಲಾಗುವುದು.

ರೀತಿಯಾಗಿ, ಸೋವಿಯೆತ್ ನಾಗರಿಕರ ವಾಸದ ಪರಿಸ್ಥಿತಿಗಳ ಸುಧಾರಣೆಯು ಅವರ ಸ್ವಂತ ಆಯವ್ಯಯದ ಮೇಲೆ ಎಷ್ಟು ಮಾತ್ರವೂ ತೊಂದರೆಯನ್ನು ಹೇರದು. ಅವರ ಮನೆ ಬಾಡಿಗೆಯು ಸ್ಥಾಯೀ ರೂಪವನ್ನು ಹೊಂದಿರುತ್ತದೆ.

ಬಾಡಿಗೆ ಎಷ್ಟು ?

ಸೋವಿಯೆತ್ ಕುಟುಂಬದ ಒಟ್ಟು ವೆಚ್ಚದಲ್ಲಿ ಮನೆ ಬಾಡಿಗೆಯು ಎಷ್ಟು ಮಾತ್ರದ್ದಾಗಿರುತ್ತದೆ ?

ಸೋವಿಯೆತ್ ನಾಡಿನಲ್ಲಿ ಮನೆ ಬಾಡಿಗೆಯ ಪ್ರಮಾಣವು ಭಿನ್ನ ಭಿನ್ನವಾಗಿರುತ್ತದೆ. ಈ ಕಟ್ಟಡದ ನಮೂನೆ, ಬಾಡಿಗೆದಾರರ ವರಮಾನ, ಮತ್ತಿತರ ಅನೇಕ ಅಂಶಗಳ ಪ್ರಕಾರ ಬಾಡಿಗೆಯನ್ನು ನಿರ್ಣಯಿಸಲಾಗುತ್ತದೆ. ಆದರೂ ಕೂಡ, ಯಾವ ಸಂದರ್ಭದಲ್ಲಿಯೇ ಆಗಲಿ, ಮನೆ ಬಾಡಿಗೆಯು ಬಾಡಿಗೆದಾರನ ತಿಂಗಳ ಸಂಬಳದ ಶೇಕಡ ೬ರಷ್ಟಕ್ಕಿಂತಲೂ ಎಂದಿಗೂ ಹೆಚ್ಚಾಗಿರುವುದಿಲ್ಲ.

ಕಡಿಮೆ ವೇತನವನ್ನು ಪಡೆಯುವ ಕಾರಖಾನೆಯ ಮತ್ತು ಕಚೇರಿಯ ಕೆಲಸಗಾರರು ಗಣನೀಯ ಪ್ರಮಾಣದಲ್ಲಿ ತಗ್ಗಿಸಲಾದ ಪ್ರಮಾಣಕ್ಕನುಗುಣವಾಗಿ ಮನೆ ಬಾಡಿಗೆಯನ್ನು ಸಲ್ಲಿಸುತ್ತಾರೆ.

ಒಂದು ನಿದರ್ಶನ

ಉದಾಹರಣೆಗೆ ಹೇಳುವುದಾದರೆ, 'ಟ್ರಾಂವೇ' ನಿಲ್ದಾಣದಲ್ಲಿ ಯಂತ್ರ ಜೋಡಣೆಯ ಕೆಲಸಗಾರನಾಗಿ (ಫಿಟ್ಟರ್) ಕೆಲಸ ಮಾಡುತ್ತಿರುವ ಅಲೆಕ್ಸೆಯಿ ಸ್ವಿನಾಕೋವ್ ಮಾಸ್ಕೋದಲ್ಲಿರುವ ಶಾಂತಿ ಸಾಲುಮರದ ಬೀದಿಯಲ್ಲಿ ೨೧ ಚದರ ಮೀಟರುಗಳ ನಿವಾಸವನ್ನು ಬಳಸುತ್ತಿದ್ದಾನೆ, ಆತನ ಸಂಬಳವು ತಿಂಗಳಿಗೆ ೧,೧೦೦ ರೂಬಲ್ಲುಗಳಷ್ಟಾಗುತ್ತವೆ.

ಆತನು ತನ್ನ ವಾಸಸ್ಥಾನಕ್ಕಾಗಿ ೪೮ ರೂಬಲ್ ೪೦ ಕೋಪೆಕ್‌ಗಳಷ್ಟು ಬಾಡಿಗೆಯನ್ನು ಪ್ರತಿ ತಿಂಗಳೂ ಸಲ್ಲಿಸುತ್ತಾನೆ. ಎಂದರೆ ಆತನ ಸಂಬಳದಲ್ಲಿ ಅದು ಶೇಕಡ ೪ರಷ್ಟಕ್ಕಿಂತಲೂ ಸ್ವಲ್ಪ ಮಾತ್ರವೇ ಹೆಚ್ಚಾಗಿದ್ದಿತು.

ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳಿ. ಎಕೆತೆರೀನಾ ಅನಿಕೆಯೇವಾ ಎಂಬಾಕೆಯು ರೈಲ್ವೇ ನಿಲ್ದಾಣದ ಉಪಾಹಾರದಂಗಡಿಯಲ್ಲಿ ಕೆಲಸ ಮಾಡುತ್ತಾಳೆ. ಆಕೆಯ ಕುಟುಂಬದಲ್ಲಿ ನಾಲ್ಕು ಜನರಿದ್ದಾರೆ. ಇಡೀ ಕುಟುಂಬದ ಒಟ್ಟು ವರಮಾನವು ತಿಂಗಳಿಗೆ ಸುಮಾರು ೨,೫೦೦ ರೂಬಲ್ಲುಗಳಷ್ಟಾಗುತ್ತದೆ. ಅವರು ೩೬.೭೬ ಚದರ ಮೀಟರುಗಳ ನೆಲ ಸ್ಥಳವುಳ್ಳ ಮನೆಯಲ್ಲಿ ವಾಸಿಸುತ್ತಾರೆ ಮತ್ತು ತಿಂಗಳಿಗೆ ೪೪ ರೂಬಲ್ ೬ ಕೋಪೆಕ್‌ಗಳಷ್ಟು ಬಾಡಿಗೆಯನ್ನು ಕೊಡುತ್ತಾರೆ.

ಸೈನಿಕರು, ಹಲವರು ವಿಶ್ರಾಂತಿ ವೇತನ ಪಡೆಯುವ ವಯೋವೃದ್ಧರು, ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳು — ಇವರೆಲ್ಲರನ್ನೂ ಒಳಗೊಂಡು ಕಾರ್ಮಿಕ ಜನತೆಯ ವಿಭಿನ್ನ ಗುಂಪುಗಳವರಿಗೆ ಶೇಕಡ ೨೫ರಿಂದ ಹಿಡಿದು ಶೇ. ೫೦ರ ವರೆಗಿನ ಬಾಡಿಗೆ ಹಣದ ರಿಯಾಯಿತಿಯನ್ನು ನೀಡಲಾಗುತ್ತದೆ.

ಸಂಪಾದನೆಯ ಸಾಧನಗಳಲ್ಲ

ಸೋವಿಯೆತ್ ಒಕ್ಕೂಟದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಸಹ, ಐದು ಕೊಠಡಿಗಳಿಗಿಂತ

(ಆನೇ ಪುಟ ನೋಡಿ)

"ಗಾಂಧೀಜಿ ಅವರು ರೂಪಿಸಿರುವ ಅಹಿಂಸೆಯ ತಂತ್ರವನ್ನು ಯಾವ ರೀತಿಯಲ್ಲಿ ಅನ್ವಯಿಸಿಕೊಳ್ಳಬೇಕೆಂಬ ವಿಚಾರದಲ್ಲಿ ತರಪೇತು ನೀಡಲಾಗುವುದು." ಎಂಬುದಾಗಿ ಗಾಂಧೀ ಸ್ಮಾರಕ ನಿಧಿಯ ಕಾರ್ಯದರ್ಶಿ ಜಿ. ರಾಮಚಂದ್ರನ್ ಅವರು ಬೆಂಗಳೂರಿನಲ್ಲಿ ಮಾತನಾಡುತ್ತ ಹೇಳಿದರಾಗಿ ವರದಿ.

● ಈ ತರಪೇತು ಯಾರಿಗೆ ? ಎಂಬುದು ಅಸ್ಪಷ್ಟವಾಗಿದ್ದರೂ ಕಾಂಗ್ರೆಸ್ ಸರ್ಕಸ್ಸಿನಲ್ಲಿ ಜನ ಬಡಕುರಿಗಳಾಗಿರುವದರಿಂದ ಅವರಿಗೆ ಅಹಿಂಸೆಯ ಉಪದೇಶವಾಗಲಿ, ತರಪೇತಾಗಲಿ ಅನಗತ್ಯ. ಕಾಂಗ್ರೆಸ್ಸಿನವರಿಗಂತೂ ಅಹಿಂಸಾ ತಂತ್ರವನ್ನು ಹೇಗೆ ಬಳಸಿಕೊಳ್ಳಬೇಕೆಂಬುದು ಈ ಹನ್ನೊಂದು ವರುಷಗಳಲ್ಲಿ ಚೆನ್ನಾಗಿ ತಿಳಿದಿದೆ. ಅಂದಮೇಲೆ ಇನ್ನಾರಿಗೆ ತರಪೇತು ?

○ ○ ○ ○

ಗಾಂಧೀ ನಿಧಿಯಿಂದ ಅಹಿಂಸೆಯ ತಂತ್ರದಲ್ಲಿ ತರಪೇತು ನೀಡಲು ಎಷ್ಟು ತೆಗೆದುಕೊಳ್ಳಲಾಗುವದೋ ಎಂಬುದೂ ಸಂದಿಗ್ಧವಾಗಿರುವದರಿಂದ ಅದರ ಅಂದಾಜನ್ನು ಈಗಲೇ ಯಾವ ಆರ್ಥಿಕ ತಜ್ಞರೂ ಮಾಡಬೇಕಾಗಿಲ್ಲ.

● ಆದರೆ ಗಾಂಧೀಜಿ ಇದ್ದಿದ್ದರೆ ಖಂಡಿತವಾಗಿ ಹಣದ ಅಂದಾಜನ್ನಲ್ಲ ಅವರ ನಿಧಿ ಸಕ್ಕರೆಯ ಸುತ್ತ ಮುಕರಿರುವ ಬಿಳೀ ಇರುವೆಗಳ ಅಂದಾಜನ್ನೇ ಮಾಡಿ ಸರಿಯಾಗಿ ಹೇಳುತ್ತಿದ್ದರು !

○ ○ ○ ○

"ಪೋಲೀಸರ ಗುಂಡಿಗೆ ನಾಲ್ಕು ಜನ ಡಕಾಯ್ತರ ಬಲಿ" ಎಂದು ಮಧ್ಯ ಪ್ರದೇಶದ ಸುದ್ದಿಯೊಂದರ ತಲೆಬರೆಹ-ಪತ್ರಿಕೆಯಲ್ಲಿ.

● "ಅಯ್ಯೋ ಎಂಥಾ ಅವಕಾಶ ತಪ್ಪಿಹೋಯಿತಲ್ಲ, ಕೇರಳದಲ್ಲಾದರೂ ನಡೆದಿದ್ದರೆ ರಾಜಕೀಯ ಕೊಲೆಗಳ ಸಂಖ್ಯೆಯನ್ನು ಹೆಚ್ಚಿಸಬಹುದಿತ್ತು ಎಂದು ಕೇರಳ ಕಾಂಗ್ರೆಸ್, ಪಿ. ಎಸ್. ಪಿ. ವಲಯಗಳಲ್ಲಿ ವ್ಯಸನವ್ಯಕ್ತಪಡಿಸಲಾಯಿತಂತೆ.

○ ○ ○ ○

ಅಮೇರಿಕೆಯ 'ಟೈಮ್' ನೇಮಿಸಲ್ಪಟ್ಟ ಭಾರತದ ಭಾವೀ ಪ್ರಧಾನಾಮಾತ್ಯ ಶ್ರೀ ಮೊರಾರ್ಜಿ ದೇಶಾಯ್ ಅಮೇರಿಕೆಯಲ್ಲಿ ಚೀನಾದ ವಿಷಯಕ್ಕೆ ಭಾರತದ ಘೋಷಿತ ನೀತಿಗೆ ವ್ಯತಿರಿಕ್ತವಾಗಿ ಮಾತನಾಡಿದ ವಿಷಯ ಲೋಕಸಭೆಯಲ್ಲಿ ಚರ್ಚೆಗೆ ಬಂದಿದ್ದಾಗ ಅಧ್ಯಕ್ಷರು "ಸಚಿವರು ಯಾವ ಕೆಲಸಕ್ಕೆ ಹೋಗುವರೋ ಅದಕ್ಕೆ ಅಂಟಿಕೊಳ್ಳಬೇಕು. ಅದನ್ನು ಗಮನಿಸಿ ಮಾತನಾಡಬೇಕು" ಎಂದು ಹೇಳಿದರಂತೆ.

● "ಕಾಂಗ್ರೆಸ್ ಮಂತ್ರಿಗಳ ಸಂಪ್ರದಾಯಕ್ಕೆ ಈ ಮಾತು ಕೊಡಲಿಯೇಟು. ಟಿ. ಟಿ. ಕೆ. ಕೂಡಾ ಹೀಗೆ ಮಾತನಾಡಿರಲಿಲ್ಲವೆ? ಸೋವಿಯತ್ ಪ್ರವಾಸಾನುಭವಗಳ ಭಾಷಣ ಬಿಗಿಯುತ್ತಿರುವಾಗ ಕೇರಳ ಪರಿಸ್ಥಿತಿ ಪರಿಶೀಲನೆಗೆ ವಿನೋಬಾವರವರನ್ನು ನಿಯಮಿಸಬೇಕು ಎಂದು ನಾನು ಹೇಳಿದುದು ತಪ್ಪೆ? " ಎಂದು ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಗುಸುಗುಟ್ಟಿದರೆಂಬ ವದಂತಿಗೆ ಕಾಲುತಲೆಗಳಿಲ್ಲವೆಂದು ಹೇಳಲಾಗಿದೆ.

○ ○ ○

ಅಂದಹಾಗೇ ರಾಜಕೀಯದಲ್ಲಿ ಸತ್ತ ಕುದುರೆ ಕೆಂಗಲ್ ಹನುಮಂತಯ್ಯ, ಸಾಹಿತ್ಯದಲ್ಲಿ ಸತ್ತ ಕುದುರೆ ಅ. ನ. ಕೃ. ಅವರುಗಳ ವಿಚಾರ ಇತ್ತೀಚೆಗೆ ಬೆಂಗಳೂರಿನಲ್ಲಿ ಮಾತುಕತೆಗಳಿಗೆ ವಸ್ತುವಾಗಿದೆ.

● ಇಷ್ಟರಲ್ಲೇ ಸ್ಥಾಪಿಸಲ್ಪಡುವ ಕರ್ನಾಟಕ ಸಾಮ್ರಾಜ್ಯದ ವಿದ್ಯಾರಣ್ಯರೇ ಅ. ನ. ಕೃ. ಅವರೆಂದೂ, ಹುಕ್ಕನೆಂದರೆ [ಬುಕ್ಕನ ಸ್ಥಳಕ್ಕೆ ಇನ್ನು ಯಾರೂ ಬುಕ್ ಆಗಿಲ್ಲ, ಆಗಿದ್ದರೂ ಆಗಿರಬಹುದು, ಹೆಸರಿನ ಪ್ರಕಟಣೆಯನ್ನು ವಾಚಕ ಮಹಾಶಯರು ನಿರೀಕ್ಷಿಸಬೇಕು] ಹನುಮಂತಯ್ಯರೆಂದೂ ಪಾತ್ರ ವಿತರಣೆಯಾಗಿದ್ದರೂ ಬೀಚಿಯವರಿಗೆ ಯಾವ ಪಾತ್ರವೆಂಬುದಿನ್ನೂ ಚರ್ಚೆಯಲ್ಲೇ ಇದೆ ಎಂದೂ, ಇತ್ತೀಚೆಗೆ ಗಣೇಶೋತ್ಸವಗಳಲ್ಲಿ ಭಾಗವಹಿಸುತ್ತಿರುವ ಕೆಂಗಲ್, ಅ. ನ. ಕೃ., ಬೀಚಿ ತಂಡದ ಚಟುವಟಿಕೆಗಳನ್ನು ಗಮನಿಸುತ್ತಿರುವವರು ಅಭಿಪ್ರಾಯ ಪಡುತ್ತಿರುವರೆಂದು ಹುರಿಗಡಲೆ ಮಾರುಕಟ್ಟೆಯಲ್ಲಿ ಮಾತನಾಡಲಾಗುತ್ತಿದೆ.

○ ○ ○ ○

ಅಂದಹಾಗೇ ಅ. ನ. ಕೃ. ಸುವರ್ಣ ಮಹೋತ್ಸವದಲ್ಲಿ ಶ್ರೀಮಾನ್ ಅ. ನ. ಕೃಷ್ಣರಾಯರು (ಮುಂದಿನ ಸಾಲಿನಲ್ಲೇ ಕುಳಿತಿದ್ದ) ಕೆ. ಹನುಮಂತಯ್ಯನವರನ್ನು (ಮಾಜೀ ಮುಖ್ಯ ಮಂತ್ರಿ, ಮೈಸೂರು ನವರನ್ನು) ಈಗಿನ ಮೈಸೂರಿನ ಮುಖ್ಯ

ಹುಂಗಾಳು

ಮಂತ್ರಿ ಶ್ರೀ ಜತ್ತಿಯವರೆದುರು ಬಾಯಿ ತುಂಬಾ ಹೊಗಳುತ್ತಿದ್ದಾಗ ಶ್ರೀಮಾನ್ ಕೆಂಗಲ್ಲರು ರಾಮ ಭಕ್ತನಂತೆ ಕರಜೋಡಿಸುತ್ತಿದ್ದುದರ ರಹಸ್ಯವೇನು ? ಎಂದು ಅನೇಕ ರಾಜಕೀಯ ರಹಸ್ಯವಾದಿಗಳು ತಲೆ ಕೆಡಿಸಿ ಕೊಂಡಿದ್ದಾರಂತೆ.

○ ○ ○

"ಸಾಹಿತ್ಯ ಪರಿಷತ್ತೆಂದರೆ ಒಂದು ಹೆಣ, ಅದನ್ನು ಹೊರಲು ಶಾಸ್ತ್ರಿಗಳಂಥ ಧಾಂಡಿಗರೇ ಸರಿ, ನನ್ನಂಥವನಲ್ಲ" ಎಂದ ಶ್ರೀ ಅ. ನ. ಕೃ. ಅಣಿಮುತ್ತುಗಳಲ್ಲಿ "ಮೈಸೂರು ಸರಕಾರವೆಂದರೆ ಒಂದು ಹೆಣ, ಜತ್ತಿಯವರಂಥ ಪುಳ್ಳಂಗೋವಿ ಅದನ್ನು ಹೊರಲು ಸಮರ್ಥರಲ್ಲ, ಕೆಂಗಲ್ಲರೇ ಸರಿ" ಎಂಬ ಬೆಳಕೂ ಇತ್ತೆಂಬ ರಾಜಕೀಯ ವೀಕ್ಷಕರ ದರ್ಶನ ಇನ್ನೂ ದೃಢ ಪಟ್ಟಿಲ್ಲ.

○ ○ ○

"ಹಣಸಂಪಾದನೆಗಿಂತ ವೃತ್ತಿನಿಷ್ಠೆಯೆ ಅತಿ ಮುಖ್ಯ" ಎಂಬುದಾಗಿ ಕಾಂಗ್ರೆಸ್ ಅಧ್ಯಕ್ಷ ಹೆಚ್. ಕೆ. ವೀರಣ್ಣ ಗೌಡರು ಪಾಂಡವಪುರದಲ್ಲಿ ಮಾತನಾಡುತ್ತ ಹೇಳಿದರಂತೆ.

–ಹಣ ಸಂಪಾದನೆಯನ್ನೇ ವೃತ್ತಿಯಾಗುಳ್ಳ ಕಾಂಗ್ರೆಸ್ ಎಂ.ಎಲ್.ಎ. ಸಚಿವೇತ್ಯಾದಿಗಳು ಅತ್ಯಂತ ನಿಷ್ಠರೇ ಆಗಿದ್ದಾರೆ. ಸಂದೇಹವೇನು ?

"ಚೌಚೌನಾಲಾ"

ಸಪ್ತಾಹ ಸ್ಫೂರ್ತಿ

ನನ್ನ ಹಳೆಯ ವಿಳಾಸಕ್ಕೆ ಬಂದಿದ್ದ ಕವರೊಂದು ನಾನಿದ್ದಲ್ಲಿಗೇ ಹುಡುಕಿಕೊಂಡು ಬಂದು ಮೊನ್ನೆ ನನ್ನ ಕೈಸೇರಿತು. ಒಳಗೇನಿದೆಯೋ ಎಂಬ ಕುತೂಹಲಕ್ಕಿಂತ 'ಫ್ರಂ' ವಿಳಾಸ ನನ್ನ ಆಸಕ್ತಿಯನ್ನು ಕೆರಳಿಸಿತು. From ಹೀಗಿತ್ತು:

....

ಡೆಪ್ಯುಟಿ ಎಂಜಿನೀಯರ್
ಹುಬ್ಬಳ್ಳಿ ಸ್ಯಾನಿಟರಿ ಸಬ್ ಡಿವಿಜನ್
ಸಾ. ....

ಇವರ ಹೆಸರನ್ನು [ಇಲ್ಲಿ ನಾನು ಉಲ್ಲೇಖಿಸಿಲ್ಲ] ನೋಡಿದಾಗ ಗತಿಸಿದ ಕೆಲವು ವರುಷಗಳ ಹಿಂದಿನ ನನ್ನ ಜೀವನದತ್ತ ನನ್ನ ಸ್ಮರಣೆಯ ಚಕ್ರಗಳು ಉರುಳಿದವು.

o o o

ದಿನವೊಂದಕ್ಕೆ ರೂ. ೧-೮-೦ ಕೂಲಿಯ ಮೇಲೆ ಧಾರವಾಡ ಜಿಲ್ಲೆಯ ಅಣೆಕಟ್ಟೊಂದರ ಕಾರ್ಯದಲ್ಲಿ ಕೆಲಸ ಮಾಡುತ್ತಿದ್ದೆ. ಅಲ್ಲಿಯ ಒಬ್ಬ ಓವರ್‌ಸೀಯರ್‌ರ ಪ್ರೀತಿ-ವಿಶ್ವಾಸ ನನ್ನ ಮೇಲೆ ತುಂಬಾ ಇತ್ತು. ಅಂತೆಯೇ ಅವರ ಬಗ್ಗೆ ಅಷ್ಟೇ ಗೌರವ ನನ್ನಲ್ಲಿತ್ತು. (ಈಗಲೂ ಇದೆ). ಎಳೆಯ ಬರಹಗಾರನೊಬ್ಬ ಮಣ್ಣಿನ ಕಾರ್ಯದಲ್ಲಿ ತೊಡಗಿದುದೇ ಓವರ್‌ಸೀಯರ್‌ರ ವಿಶ್ವಾಸಕ್ಕೆ ಕಾರಣವಾಗಿರಬೇಕು. ಕೆಲಸವಿದ್ದರೆ ಕೂಲಿ, ಕೂಲಿಯಿದ್ದರೆ ಹೊಟ್ಟೆಗೆ ಅನ್ನ, ಇಲ್ಲದಿದ್ದರೆ ಇಲ್ಲ. ಹೀಗೆ ತಿಂಗಳಿನ ಬಹುಭಾಗವನ್ನು ಉಪವಾಸದಲ್ಲೇ ನಾನು, ನನ್ನ ಸಹಕಾರ್ಮಿಕರು ಕಳೆಯುತ್ತಿದ್ದ ಕ್ರೂರ ದಿನಗಳು, ಅಧಿಕಾರಿಗಳು ತೋರಿಸುತ್ತಿದ್ದ ಬೇಸರದ ನಡುವಳಿಕೆಗಳು ಒಂದೊಂದೂ ನೆನಪಾದುವು. ಈ ಓವರ್‌ಸೀಯರ್‌ರ ಆತ್ಮೀಯತೆ ಅಲ್ಲಿ ನನ್ನ ಬದುಕನ್ನು ಕೊಂಚ ಸಹನೀಯವಾಗಿಸಿತ್ತು.

ಮೇಲ್ಕಂಡ ವಿಳಾಸದಿಂದ ಸದರೀ ಓವರ್‌ಸೀಯರ್‌ರು ಡೆಪ್ಯುಟಿ ಎಂಜಿನೀಯರ್‌ರ ಸ್ಥಳಕ್ಕೆ ಬಡ್ತಿ ಹೊಂದಿದುದನ್ನು ಕಂಡು ನನಗೆ ಸಂತೋಷವೇ ಆಯಿತು. ನನ್ನ ಬಡ್ತಿ ಎಂಥದು? ಮಣ್ಣು ಹೊರುವ ಕಾರ್ಯದಿಂದ ಮೆದುಳ ದುಡಿಮೆಗಾರನಾದುದು! ಸುತ್ತಲಿನ ಜೀವನದ ಬಗ್ಗೆ ಮನಸ್ಸಿನ ಆಳದಲ್ಲಿ ಪುಟಿದೇಳುತ್ತಿದ್ದ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಲು ಕಲಿತುದು!

o o o

ಈಗ ಎಂಜನೀಯರ್‌ರಾಗಿರುವ ನಮ್ಮ ಮಾಜೀ 'ಸಾಹೇಬ'ರಿಂದ ೪-೫ ವರುಷಗಳ ಬಳಿಕ ಕಾಗದ ಬಂದರೆ ವಿಶೇಷವಲ್ಲದೆ ಇನ್ನೇನು? ಅದೂ ನನ್ನನ್ನು ಜ್ಞಾಪಕದಲ್ಲಿಟ್ಟಿರುವರಲ್ಲ!

ಸುದೈವದ ಸರಪಣಿ

ಅಂದಮೇಲೆ ಸಂಭ್ರಮದಿಂದಲೇ ಕಾಗದ ಬಿಚ್ಚಿದೆ. ಆಗಿನ 'ಕೀಳು' ಕೆಲಸಕ್ಕಿಂತ ಈಗ ನನಗೇನಾದರೂ ಒಂದು ಮಟ್ಟದ ನೌಕರಿಯ ಕಾಣಿಕೆಯೇನಾದರೂ ಇದರಲ್ಲಿರಬಹುದೇ ಎಂದು ನಾನು ಊಹಿಸಿದ್ದರೆ ತಪ್ಪೇನಿಲ್ಲ. [ಅಂಥ ಕೊಡುಗೆ ಬಂದರೂ ನಾನೇನು ನನ್ನ ಈಗಿನ ವೃತ್ತಿಯಿಂದ ಕದಲಲಾರೆ, ಆ ಮಾತು ಬೇರೆ.]

ಕಾಗದ ಬಿಚ್ಚಿದೆ. ಇಂಗ್ಲೀಷನಲ್ಲಿ ಟೈಪ್ ಆಗಿತ್ತು. ತಲೆಬರಹ: "Chain of Good Luck"-ಸುದೈವದ ಸರಪಣಿ.

ಏನು ವಿಷಯ?

ಇದೊಂದು ಕಾಗದ. ಹೆಸರು 'ಸುದೈವದ ಸರಪಣಿ' ಎಂದು. ಅಮೇರಿಕೆಯಲ್ಲಿಂದ ಆರಂಭವಾದ ಈ ಸರಪಣಿ ಈಗ ಪ್ರಪಂಚವನ್ನು ಸುತ್ತುತ್ತಿದೆಯಂತೆ. ಈ ಸುದೈವದ ಸರಪಣಿ (ಕಾಗದ) ಯಾರ ವಿಳಾಸಕ್ಕೆ ಬರುವುದೋ, ಅದು ತಲುಪಿದ 72 ಗಂಟೆಗಳಲ್ಲೇ 12 ಜನರಿಗೆ ಅವರೂ ಈ ಸರಪಣಿಯನ್ನು ಸಾಗಿಸಬೇಕಂತೆ. ಈ ಸರಪಣಿಯನ್ನು ಸಾಗಿಸಿದ ಒಬ್ಬರಿಗೆ ಕಷ್ಟದಲ್ಲಿದ್ದಾಗ ಬಹುಮಾನ ಬಂತಂತೆ, ಮಿ|| ರೂಜ್‌ವೆಲ್ಟ್ ಇದರಿಂದ ಪ್ರಥಮ ಬಾರಿಯಾಗಿ ಅಮೇರಿಕೆಯ ಅಧ್ಯಕ್ಷರಾದರಂತೆ. ಎಂ. .... ಲುಂಗ್ (ಟೈಪ್ ಆದುದು ಸರಿಯಾಗಿ ಕಾಣೋದಿಲ್ಲ) ಎಂಬವರು ಈ ಸರಪಣಿ ಬಗ್ಗೆ ಅಪಹಾಸ್ಯದಿಂದ ನಕ್ಕದ್ದರಿಂದ 3 ಗಂಟೆಗಳಲ್ಲೇ ಅಪಘಾತಕ್ಕೆ ಒಳಗಾದರಂತೆ. ಈ ಸರಪಣಿಯನ್ನು ಮುಂದೊರೆಸದವರಿಗೆ ದುರ್ದೈವ ಒದಗುತ್ತದೆಯಂತೆ!

o o o

ನೋಡಿದಿರಾ ಸುದೈವದ ಸರಪಣಿಯನ್ನು? ಅಂತೆಯೇ ಈ ಎಂಜನೀಯರರು ಹನ್ನೆರಡು [ಇವರೆಲ್ಲ ಅವರ ಶಾಖೆಯಲ್ಲಿ ದೊಡ್ಡ ದೊಡ್ಡ ಹುದ್ದೆಗಳಲ್ಲಿರುವವರೆ] ಜನರಿಗೆ ಇದನ್ನು ಸಾಗಿಸಿದ್ದಾರೆ. ಅವರಲ್ಲಿ ನಾನೂ ಒಬ್ಬ!

ಇದಕ್ಕೆ ತಗುಲಿದ ವೆಚ್ಚ? 12×8= 96 ನಯೆ ಪೈಸೆ!

o o o

ಇಂಥ ಮೂಢ, ಮೂರ್ಖ ವಿಚಾರಗಳು ನಮ್ಮ ದೇಶದ ಮುಗ್ಧ ಜನರನ್ನು [ಮರುಳುಗೊಳಿಸಲು ಬಹಳ ಕಾಲ ಬೇಕಾಗಿಲ್ಲ. ನಮ್ಮ ಈ 'ಸಾಹೇಬ'ರಂಥ ಪದವೀಧರರು, ಹೊಸಬರು, ಆಧುನಿಕರು ಈ ಹುಚ್ಚುಗೆಲಸಕ್ಕಿಳಿದಾಗ ಹಳ್ಳಿಗನ ಪಾಡೇನು?

ಈ ಸರಪಣಿ ಅಮೇರಿಕೆಯಲ್ಲಿ ಆರಂಭವಾಯಿತೋ ಇಲ್ಲವೊ ಎಂಬುದು ಬೇರೆ ವಿಚಾರ. ಆದರೆ ಅಲ್ಲಿ ಆರಂಭವಾಗಿದ್ದರೆ ಅದರಲ್ಲಿ ಸೋಜಿಗವೇನಿಲ್ಲ. ಯಾಕೆಂದರೆ ಅಮೇರಿಕೆಯ ಬಂಡವಾಳಶಾಹಿ ಸಂಸ್ಕೃತಿಯ ವಿಕಾರಗಳು ದೇವರು, ಧರ್ಮ, ಸುದೈವ, ದೇವತಾ ರಕ್ಷಣೆ ಮುಂತಾದ ಆವರಣಗಳಲ್ಲಿ ಜನರನ್ನು ಮೋಸಗೊಳಿಸುತ್ತಲೇ ಇವೆ — ತಾನೇ ಒಮ್ಮೆ ಪೂರ್ಣ ಮೋಸಹೋಗುವವರೆಗೆ!

o o o

ಹುಷಾರ್!, ಈ ಸರಪಣಿ ನಿಮ್ಮವರಿಗೂ ಬಂದೀತು. ಬಂದರೆ ಅದೇನು ನಿಮ್ಮ ಕೈಕಾಲುಗಳನ್ನು ಬಿಗಿದು ಹೊಂಡಕ್ಕೆ ಚೆಲ್ಲದು. ನಿಮ್ಮ ಜೇಬಿನಿಂದ ಸರಪಣಿಯ ಸಾಗಾಣಿಕೆಗೆ (ಬುಕ್‌ಪೋಸ್ಟ್) 98 ನಯೆ ಪೈಸೆಗಳನ್ನು ಮಾತ್ರ ಕಿತ್ತುಕೊಳ್ಳುತ್ತದೆ. ಅದು ಬಂದಾಗ ಸುಮ್ಮನೆ ಚರ್ ಎಂದು ಹರಿದು ಕಸದ ಬುಟ್ಟಿಗೆ ಸೇರಿಸಿರಿ. ಇನ್ನೇನು ಮಾಡಬೇಡಿ! ಈ ಸರಪಣಿಗೆ ಕೈಕಾಲು ತೊಡಗಿಸಿದ ಇಂಥ ಬುದ್ಧಿವಂತರ ಬಗ್ಗೆ ತುಚ್ಛೀಕಾರದಿಂದ ನಕ್ಕುಬಿಡಿ. ಸ್ವತಂತ್ರ ದೇಶದ ಸ್ವತಂತ್ರ ಬುದ್ಧಿಯ ನಾಗರಿಕರಾಗಿ, ಪ್ರಬುದ್ಧರಾಗಿ ಬೆಳೆಯಬೇಕಾಗಿರುವ ನೀವು—ನಾವು— ಮೂಢಭಾವನೆಯ ಗುಲಾಮರನ್ನಾಗಿಸುವ ಇಂಥ ಕೃತಿಗಳ ಬಗ್ಗೆ ಥತ್ ಎಂದು ಧಿಕ್ಕಾರ ಹೇಳಿಬಿಡಿ, ಅಷ್ಟೆ.

ಭಾರತ ಸರ್ಕಾರದ ಅಂಚೆ ಶಾಖೆಗೆ ಲಾಭವಾಗಬೇಕೆಂದೇನಾದರೂ ನಿಮ್ಮಾಶೆಯಿದ್ದರೆ ನಿಮ್ಮ ಪರಿಚಿತರಿಗೆ, ಸ್ನೇಹಿತರಿಗೆ ಸುಮ್ಮನೆ ಶುಭಾಶಯಗಳನ್ನು ಕಳುಹಿಸಿರಿ, ವಿನಃ ಈ ಸುದೈವದ ಸರಪಣಿಯನ್ನು ಕಳುಹಿಸಬೇಡಿ.

ಇದು ಸುದೈವದ ಸರಪಣಿಯಲ್ಲ, ನಮ್ಮ ಮೂಢ ಜನರನ್ನು ಇನ್ನೂ ಮೂಢರನ್ನಾಗಿಸುವ ದುರ್ದೈವದ ಸರಪಣಿ!

"ವೀತಾಶೋಕ"

ಯಾರಿಗೂ ಕಾಣಿಸದು

(೪ನೇ ಪುಟದಿಂದ)

ದಾಗ, ತನ್ನ ಕತೆಯಲ್ಲಿ ಬಂದ ಸುಂದರ ತರುಣಿಯರ ನೆನಪು ಮರುಕಳಿಸಿತು. ಯಾರೋ ಒಬ್ಬ ಯುವತಿ, ಈತನ ಒಣಗಿದ ಮುಖವನ್ನು ನೋಡಿ ಮುಖ ಸಿಂಡರಿಸಿಕೊಂಡಳು.

—ಆದರೆ ಅದೇ ಯುವತಿಯನ್ನು ಆತ ಕತೆಯಲ್ಲಿ ಕಂಡಿದ್ದಾಗ, ಅವಳ ಕೆನ್ನೆ ಗುಲಾಬಿ ಬಣ್ಣವಾಗಿ ಮಾರ್ಪಟ್ಟು, ಅವಳು ಕಣ್ಣುಗಳಲ್ಲಿ ನಗೆ ಸೂಸಿದ್ದಳು. ನಾಚಿ-ನಾಚಿ ಮಾತನಾಡಿದ್ದಳು—ಈಗ?

ತನ್ನ ಪಕ್ಕದಲ್ಲಿದ್ದವರೊಬ್ಬರು ತಮ್ಮ ಚೀಲದಿಂದ ಪತ್ರಿಕೆಯೊಂದನ್ನು ತೆಗೆದು ಬಿಡಿಸಿ ಓದಲಾರಂಭಿಸುತ್ತಾರೆ. ಅದೇನೂ ಕತೆಗಾರನಿಗೆ ಅಪರಿಚಿತ ಪತ್ರಿಕೆಯಲ್ಲ. ಅದರಲ್ಲಿ ಆತನ ಎಷ್ಟೋ ಕತೆಗಳು ಪ್ರಕಟವಾಗಿವೆ. ಇನ್ನೂ ಪ್ರಕಟವಾಗದವೂ ಇವೆ!

ನಿಜಕ್ಕೂ ಆಶ್ಚರ್ಯದ ಸಂಗತಿಯೆಂದರೆ, ಅಂದಿನ ಸಂಚಿಕೆಯಲ್ಲಿಯೂ ಆತನದೊಂದು ಕತೆ ಪ್ರಕಟವಾಗಿತ್ತು. ಕತೆಗಾರನ ಎದೆಯುಬ್ಬಿತು. ಅವರು ಓದಿಯಾದ ಮೇಲೆ ಅದನ್ನು ಪಡೆದುಕೊಂಡ. ತನ್ನ ಕತೆಯನ್ನೇ ಓದಿದ. ಓದುವಾಗ ಆತನ ಹೃದಯ ಸ್ಪ್ರಿಂಗ್‌ನಂತೆ ಹಾರಾಡಿತು. ಪಕ್ಕದವರು ಆ ಕತೆಯನ್ನು ಬರೆದವನ ಹೊಗಳಿಕೆಗೆ ಪ್ರಾರಂಭಿಸಿದರು. ಕತೆಗಾರ ಭಾವಪರವಶನಾದ..........

ಆ ಕತೆಯಿಂದ ದೊರೆತುದು ಅಷ್ಟೆ. ಪತ್ರಿಕಾ ಕಛೇರಿಗಳಿಗೆ ಹತ್ತಿ ಇಳಿದುದಾಯಿತು. ಅಲ್ಲಿ ದೊರೆತುದೂ ಅಷ್ಟೆ. 'ತಮಗೆ ಬೇಕೆನಿಸಿದಾಗ ಖಂಡಿತ ಕರೆದುಕೊಳ್ಳುತ್ತೇವೆ'

ಮತ್ತೊಂದು ಅನಿರೀಕ್ಷಿತವೆಂದರೆ, ನಮ್ಮ ಕತೆಗಾರನಿಗೆ ಉದ್ಯೋಗ ದೊರೆತುದು! ಆತ ಅದನ್ನು ಕನಸಿನಲ್ಲಿಯೂ ಚಿಂತಿಸಿರಲಾರ! ಆದರೂ ತಾನಾಗಿಯೇ ಅದು ದೊರಕಿತು. ಯಾವ ಉದ್ಯೋಗ?

ಅದೇ ಕೂಲಿ, ದಿನಗೂಲಿ!

ಕತೆಗಾರ ಎದೆಗುಂದಲಾರ. ಕತೆಯಲ್ಲಿ ಬರುವ ಹೋರಾಟ; ಬದುಕಿನ ಹೋರಾಟ—ಎರಡಕ್ಕೂ ವ್ಯತ್ಯಾಸವಿದೆಯೆ?— ಎಂಬುದನ್ನು ಚಿಂತಿಸುತ್ತಾನೆ. ನಿಜಕ್ಕೂ ಕಲಿಯಬೇಕಾದ ಜೀವನದಲ್ಲಿ ಕೂಲಿಗಾರ ಬದುಕೂ ಒಂದಾಗಿದೆ. ಅಲ್ಲಿ ಅವನಿಗೆ ತೃಪ್ತಿಯೋ-ಅತೃಪ್ತಿಯೋ-ಆಬಗ್ಗೆ ಚಿಂತಿಸಲಾರ. ಅಲ್ಲಿರುವ ಹುಳುಕು, ಥಳುಕು-ಕಷ್ಟ-ಸಂಕಟಗಳ ಬಗ್ಗೆ ಚಿಂತಿಸುತ್ತಾನೆ. ತನ್ನ ಜೀವನದ ಒಂದು ಮುಖ ಒಂದು ಕಡೆ ಸಾಗುತ್ತಿದ್ದರೂ; ಒಂದು ಕಡೆ ತಾನಿನ್ನೂ ಕತೆಗಾರನಾಗಿಯೇ ಉಳಿದಿರುವುದನ್ನು ಕಾಣುತ್ತಾನೆ. ಅಷ್ಟಕ್ಕೆ ಆತನಿಗೆ ಸಂತೋಷ. ಸರಿ ಕೂಲಿಕಾರ ಜೀವನದ ಕತೆ ಪ್ರಾರಂಭವಾಗುತ್ತದೆ.

ಕತೆಗಾರನ ಹಿಂಗದ ಹಸಿವಿನ ಜತೆಗೆ ಹೊಟ್ಟೆಯಲ್ಲಿ ಸಂಕಟ ಪ್ರಾರಂಭವಾಗುತ್ತದೆ. ಡಾಕ್ಟರಲ್ಲಿಗೆ ಹೋದಾಗ ಉಬ್ಬಸ ರೋಗವೆನ್ನುತ್ತಾರೆ. ಸರಿ ಅದೂ ಒಂದು ಅನುಭವ—ಆತನಿಗೆ.

ನೋವೂ ಆರಂಭವಾಗುತ್ತದೆ. ಆಗ ಆತ ಮತ್ತೆ ತನ್ನ ಲೇಖನಿಯನ್ನೆತ್ತುತ್ತಾನೆ, ಅದನ್ನು ಮಸೆಯುತ್ತಾನೆ, ಅನ್ಯಾಯಕ್ಕಿದುರಾಗಿ ಆಡಿಸುತ್ತಾನೆ. ಬಿಳಿಯ ಕಾಗದ ಕರಿಯದಾಗುತ್ತದೆ, ಒಡೆದ ಕನ್ನಡಿಯಂತೆ ಕಾಣುತ್ತದೆ, ಅದರಲ್ಲಿ ಸುತ್ತಲಿನ ಜನ, ಅವರ ಜೀವನ, ದುಃಖ, ಜಡತೆ, ಅನ್ಯಾಯಗಳು ವಿರಾಟ್ ರೂಪದಲ್ಲಿ ಛಿದ್ರ ಛಿದ್ರವಾಗಿ ಕಾಣುತ್ತವೆ. ಆದರೆ ಅದರಲ್ಲಿ, ಅವರೊಂದಿಗೆ, ಅವುಗಳೊಂದಿಗೆ ಆತನಿರುವುದು ಮಾತ್ರ ಯಾರಿಗೂ ಕಾಣದು!

— —

ಸಂಬಳದಲ್ಲಿ ಪಂಚಿಂಗ್!

ಭದ್ರಾವತಿ: ಇಲ್ಲಿಯ ಕಾರ್ಮಿಕರಿಗೆ ಹೊಸತಾಗಿ ಕಾರ್ಡುಗಳನ್ನು ಕೊಡಲಾಗಿದೆ. ಈ ಕಾರ್ಡುಗಳನ್ನು ಪಂಚಿಂಗ್ ಮೆಷಿನ್‌ಗಳಲ್ಲಿ ಕೊಟ್ಟು ಪಂಚ್ ಮಾಡಿಸಿಕೊಂಡು ಪ್ರತಿನಿತ್ಯವೂ ಕೆಲಸಕ್ಕೆ ಹೋಗಬೇಕು. ಹೊರಗೆ ಹೋಗಬೇಕಾದರೂ ಪಂಚ್ ಮಾಡಿಸಬೇಕು. ಇದರಿಂದ ವಿನಾಕಾರಣ ಕಾಲಹರಣವಾಗುತ್ತಿದೆ. ತುಂಬ ಬೆಲೆಯ ಈ ಮೆಷಿನುಗಳೂ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಉದಾಹರಣೆಗೆ— ಒಬ್ಬ ಕೆಲಸಗಾರನಿಗೆ 90 ರೂ. ಸಂಬಳ ಬರಬೇಕಾಗಿರುತ್ತೆ. ಆದರೆ ಅವನಿಗೆ ಸಂಬಳದಲ್ಲಿ 9 ರೂಪಾಯಿ ಮಾತ್ರ ಸಿಕ್ಕುತ್ತೆ. ಸೊನ್ನೆ ಹಾರಿ ಬಿಟ್ಟಿರುತ್ತೆ! ಆತನು 9 ರೂಪಾಯಿ ತೆಗೆದುಕೊಂಡು ಹೋಗಿ ಆಫೀಸಿನಲ್ಲಿ ಅರಚಿಕೊಂಡರೂ ಆ ದಿನ ಆತನಿಗೆ ಪೂರ್ಣ ಸಂಬಳನೇ ದೊರೆಯುವುದಿಲ್ಲ. ಅದಕ್ಕಾಗಿ ಆತ ಮತ್ತೆ ನಾಲ್ಕು ದಿನ ಕಾಯಬೇಕು! ಹೀಗೆ ಅನೇಕ ರೀತಿಯ ಹಾವಳಿಗಳನ್ನು ಈ ಪಂಚಿಂಗ್ ಮೆಷಿನ್ ನಡೆಸಿದ್ದು ಕಾರ್ಮಿಕರು ಬೇಸತ್ತು ಮೊದಲಿನಂತೆ ಟೋಕನ್ ಪದ್ಧತಿಯೇ ಜಾರಿಗೆ ಬರಲಿ ಎಂದು ಕೇಳುತ್ತಿದ್ದಾರೆ.

ಉ. ಕರ್ನಾಟಕದಲ್ಲಿ ಕಮ್ಯೂನಿಸ್ಟ್ ಪಾರ್ಟಿಯಿಂದ ಜನಸಂಘಟನೆಗಾಗಿ ಎಡೆಬಿಡದ ಚಟುವಟಿಕೆಗಳು

ಹಾವೇರಿ

ಧಾರವಾಡ ಜಿಲ್ಲಾ ಹಾವೇರಿಯಲ್ಲಿ 10—9—58 ರಂದು ಪ್ರಪ್ರಥಮವಾಗಿ ಕಮ್ಯೂನಿಸ್ಟ್ ಪಾರ್ಟಿಯ ಸಾರ್ವಜನಿಕ ಸಭೆ, ಮೆರವಣಿಗೆ, ಕಾರ್ಯಕರ್ತರ ಸಭೆ ಮುಂತಾದ ಕಾರ್ಯಕ್ರಮಗಳು ನಡೆದುವು. ಪ್ರಾಂತ ಸಮಿತಿಯ ಸದಸ್ಯ ಬಿ. ವಿ. ಕಕ್ಕಿಲಾಯರು ಬೆಂಗಳೂರಿನಿಂದ ಆಗಮಿಸಿದ್ದರು. ರೈಲ್ವೆ ನಿಲ್ದಾಣದಲ್ಲಿ 200 ಕ್ಕಿಂತಲೂ ಹೆಚ್ಚು ಜನ ನಾಗರಿಕರೂ ರೈತರರೂ ಸೇರಿದ್ದರು. ಅಲ್ಲಿಂದ ಕೆಂಬಾವುಟದೊಡನೆ ಮೆರವಣಿಗೆ ಹೊರಟು ನಗರ ಸುತ್ತಾಡಿ ಹಿರಿಯ ನಾಯಕ ಶ್ರೀ ಹೊಸಮುನಿ ಸಿದ್ದಪ್ಪನವರ ಮನೆಗೆ ಸಾಗಿತು.

ಮಧ್ಯಾಹ್ನ 2ಘಂಟೆಗೆ ರೈತ ಕಾರ್ಯಕರ್ತರ ಸಭೆ ನಡೆಯಿತು. ಶ್ರೀ ವಿ ಪಂಚಾಕ್ಷರಿಯವರು ರೈತ ಸಂಘಟನೆಯ ಅವಶ್ಯಕತೆಯನ್ನು ಕುರಿತು ಮಾತನಾಡಿದರು. ಶ್ರೀ ಕಕ್ಕಿಲ್ಲಾಯರು ಕರ್ನಾಟಕ ಪ್ರಾಂತ ರೈತ ಸಂಘದ ನಿರ್ಣಯಗಳನ್ನು ವಿವರಿಸಿದ್ದಲ್ಲದೆ, ಭೂಸುಧಾರಣೆಯ ಅವಶ್ಯಕತೆಯನ್ನು ತಿಳಿಸಿ ಹೇಳಿದರು. ಜತ್ತಿ ಸಮಿತಿಯ ವರದಿಯಂತೆ ಮುಂಬಯಿ ಪ್ರದೇಶದಲ್ಲಿ ಲಾವಣಿ ಈಗಿರುವುದಕ್ಕಿಂತ ಹೆಚ್ಚಾಗುವುದು ಮತ್ತು ಜಮೀನಿನಲ್ಲಿ ರೈತರಿಗೆ ಈಗಿರುವ ರಕ್ಷಣೆಯೂ ಇಲ್ಲದೆ ಹೋಗುವುದೆಂದು ತಿಳಿಸಿದರು, ರೈತ ಸಂಘವನ್ನು ಕಟ್ಟಬೇಕೆಂದು ವಿನಂತಿ ಮಾಡಿದರು.

ಸಂಜೆ 6 ಘಂಟೆಗೆ ಎತ್ತಿನಹಳ್ಳಿಯಲ್ಲಿ ರೈತರ ಬಹಿರಂಗ ಸಭೆಯು ಶ್ರೀ ಮೈಲಾರರವರ ಅಧ್ಯಕ್ಷತೆಯಲ್ಲಿ ಜರುಗಿ, ಶ್ರೀ ಪಂಚಾಕ್ಷರಿ ಮತ್ತು ಕಕ್ಕಿಲ್ಲಾಯರು ಭಾಷಣ ಮಾಡಿದರು.

ರಾತ್ರಿ 9-30 ಘಂಟೆಗೆ ಹಾವೇರಿಯ ನೇತಾಜಿ ಚೌಕದಲ್ಲಿ ಮಾಜಿ ಹೈಸ್ಕೂಲ್ ಹೆಡ್‌ಮಾಸ್ತರ್ ಶ್ರೀ ಎಚ್.ಜಿ. ಬೆಂಗೇರಿ ಎಂ.ಎ., ಬಿ.ಟಿ. ಅವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ಜರಗಿತು. ಶ್ರೀ ಬಿ. ವಿ. ಕಕ್ಕಿಲ್ಲಾಯರು ಕಮ್ಯೂನಿಸ್ಟ್ ಪಾರ್ಟಿಯ ಧ್ಯೇಯ–ಧೋರಣೆಗಳನ್ನು ವಿವರಿಸಿದರು. ಕೇರಳ ಸರಕಾರದ ಮಹತ್ಸಾಧನೆಗಳನ್ನು ವಿವರಿಸಿ, ಅಲ್ಲಿ ಕಾಂಗ್ರೆಸ್, ಪೀಯಸ್ಪಿ, ಮುಸ್ಲಿಂಲೀಗ್ ಮುಂತಾದ ಪ್ರತಿಪಕ್ಷಗಳು ಪ್ರತಿಗಾಮಿಗಳ ಕೈಗೊಂಬೆಗಳಾಗಿ, ಕಮ್ಯೂನಿಸ್ಟ್ ಸರಕಾರದ ವಿರುದ್ಧ ಅಕ್ರಮವಾಗಿ ವರ್ತಿಸುತ್ತಿರುವುದನ್ನು ಖಂಡಿಸಿದರು. ಅಲ್ಲದೆ ಕಾಂಗ್ರೆಸಿನ ಕೇಂದ್ರ ನಾಯಕತ್ವವೂ ಕೇಂದ್ರ ಸರಕಾರವೂ ಕೇರಳದ ಕಮ್ಯೂನಿಸ್ಟ್ ಸರಕಾರಕ್ಕೆ ವಿರೋಧವಾಗಿ ಸ್ವಜನ ಪಕ್ಷಪಾತತನದ ಮತ್ತು ಅನ್ಯಾಯದ ನೀತಿಯನ್ನು ಅನುಸರಿಸುತ್ತಿರುವುದನ್ನು ಟೀಕಿಸಿದರು. ಮೈಸೂರು ಸರಕಾರದ ನಿಷ್ಕ್ರಿಯಾವಸ್ಥೆಯನ್ನೂ ಜನದ್ರೋಹ ರೀತಿ–ನೀತಿಗಳನ್ನು ಬಯಲಿಗೆಳೆದು, ಜನತೆ ಸಂಘಟಿತವಾಗಬೇಕೆಂದು ಕೇಳಿಕೊಂಡರು.

ಸೌದತ್ತಿ

ಬೆಳಗಾಂ ಜಿಲ್ಲಾ ಸೌದತ್ತಿಯಲ್ಲಿ 13-9-58 ಈ ದಿನ ಸಾಯಂಕಾಲ ಶ್ರೀ ಪದಕಿ, ಎಂ.ಎಲ್.ಎ. (ಸ್ವತಂತ್ರ) ಇವರ ಅಧ್ಯಕ್ಷತೆಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಸಾರ್ವಜನಿಕ ಸಭೆ ಜರಗಿತು. ಶ್ರೀ ಬಿ.ಜಿ. ಸಾಲಿಮಠ ಇವರು ಸಭಿಕರನ್ನು ಸ್ವಾಗತಿಸಿದರು. ಶ್ರೀ. ಎನ್. ಕೆ. ಉಪಾಧ್ಯಾಯರವರು ರೈತರ ಮುಂದಿರುವ ಸಮಸ್ಯೆಗಳನ್ನು ವಿವರಿಸಿದರು. ಮುನ್ಸಿಪಾಲಿಟಿಯು ಜಕಾತಿ ನಾಕೆಯ ನೌಕರದಾರರಿಗೆ ಕೊಡತಕ್ಕ ಓವರ್‌ಟೈಮ್ ಎಲೊವೆನ್ಸ್ಅನ್ನು ಸೌದತ್ತಿ ಮುನಿಸಿಪಾಲಿಟಿ ಕೊಡುವುದಿಲ್ಲ. ಅದನ್ನು ಕೂಡಲೆ ಕೊಡಮಾಡಬೇಕು. ಮುನ್ಸಿಪಲ್ ಕೆಲಸಗಾರರಿಗೆ ಕನಿಷ್ಠ ವೇತನವನ್ನೂ ಕೊಡದಿರುವುದು ಬೇಕಾಯಿದೆಶೀರ ಮತ್ತು ಅನ್ಯಾಯದ್ದಿದೆ. ಅದನ್ನು ಮುನ್ಸಿಪಾಲಿಟಿ ಕೊಡಬೇಕು ಎಂದು ಉಪಾಧ್ಯಾಯರು ವಿವರಿಸಿದರು.

ಹಿಂದೆ ಯೋಜನೆ ಮಾಡಿದ್ದಂತೆ ಮಲಪ್ರಭಾ ನದಿಗೆ ಅಸೋಗದಲ್ಲಿ ಅಣೆಕಟ್ಟು ಕುಟ್ಟುವುದರ ಬದಲು ಸೌದತ್ತಿಯ ಸಮೀಪ ಕಟ್ಟುವ ಯೋಚನೆ ನಡೆದಿದೆಯೆಂದು ತಿಳಿದು ಈ ಪ್ರದೇಶದ ಜನರು ತುಂಬ ಕಳವಳಕ್ಕೆ ಗುರಿಯಾಗಿದ್ದಾರೆ. ಮುನ್ನೂರು ಎಕ್ರೆಗಿಂತ ಹೆಚ್ಚು ವಿಸ್ತೀರ್ಣದಲ್ಲಿರುವ 40ಹಳ್ಳಿಗಳು ಜಲಾಶಯದಲ್ಲಿ ಮುಳುಗುವುದಲ್ಲದೆ ಜಮೀನು ಕೂಡ ಸವಳಾಗುವ ಅಪಾಯವಿದೆ. ಅಣೆಕಟ್ಟು ಅಸೋಗದಲ್ಲೇ ಕಟ್ಟಲ್ಪಡಬೇಕೆಂದು ಸೌದತ್ತಿ–ಬೈಲಹೊಂಗಲ ಜನರು ಸರಕಾರಕ್ಕೆ ಮನವಿ ಮಾಡಿಕೊಳ್ಳುತ್ತಾರೆ. ಈ ವಿಷಯವನ್ನು ಉಪಾಧ್ಯಾಯರು ತಿಳಿಸಿ ಹೇಳಿದರು.

ರೈತ ಮುಖಂಡ ಕಾ|| ಕಕ್ಕಿಲ್ಲಾಯರ ಸಂಚಾರ

ಶ್ರೀ ಬಿ. ವಿ. ಕಕ್ಕಿಲ್ಲಾಯರು ಇಂದಿನ ಆಹಾರದ ಪರಿಸ್ಥಿತಿ, ಆರ್ಥಿಕ ಮುಗ್ಗಟ್ಟಿನ ಪರಿಣಾಮ ಮತ್ತು ಅವುಗಳ ಪರಿಹಾರ ಮಾರ್ಗ, ಮೈಸೂರಿನ ರಾಜಕೀಯ ಹಾಗು ಕೇರಳ ಪರಿಸ್ಥಿತಿಯ ಬಗ್ಗೆ ಮಾತನಾಡಿದರು.

ಅಧ್ಯಕ್ಷರು ಮಾತನಾಡುತ್ತ ಸೌದತ್ತಿ ಮುನ್ಸಿಪಾಲಿಟಿಯವರು ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡರು.

ಸಂಸುದ್ದಿ

ಬೆಳಗಾಂ ಜಿಲ್ಲಾ ರಾಯಬಾಗ್ ತಾಲೂಕು ಸಂಸುದ್ದಿಯಲ್ಲಿ ಶ್ರೀ ಮಾರುತಿ ಬಾಳಪ್ಪ ಪೂಜಾರಿಯವರು ಏರ್ಪಡಿಸಿದ್ದ ಕಾರ್ಯಕರ್ತರ ಸಭೆಯಲ್ಲಿ ಶ್ರೀ ಎನ್. ಕೆ, ಉಪಾಧ್ಯಾಯರೂ ಶ್ರೀ ಬಿ. ವಿ. ಕಕ್ಕಿಲ್ಲಾಯರೂ ರೈತ ಸಂಘಟನೆ ಮತ್ತು ಕಮ್ಯೂನಿಸ್ಟ್ ಪಾರ್ಟಿಯನ್ನು ಕಟ್ಟುವ ಅವಶ್ಯಕತೆಯನ್ನು ವಿವರಿಸಿದರು.

ಗೋಕಾಕ ಫಾಲ್ಸ

ತಾ 15-9-'58ರಂದು ಗೋಕಾಕ ಫಾಲ್ಸ್ ಗಿರಣಿ ಕೆಲಸಗಾರರ ಸಭೆಯು ಗಿರಣಿ ಕಾಮಗಾರ ಸಂಘದ ಕಾರ್ಯದರ್ಶಿ ಶ್ರೀ ಎ. ಎಚ್. ದೇಸಾಯಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎನ್. ಕೆ. ಉಪಾಧ್ಯಾಯರು ಕಾರ್ಮಿಕರ ಐಕ್ಯಕೆಯ ಪ್ರಾಮುಖ್ಯತೆಯನ್ನು ವಿವರಿಸಿದರು. ಗಿರಣಿಯಲ್ಲಿ ಮಾಲಿಕರು ನಡೆಸುತ್ತಿರುವ ದಬ್ಬಾಳಿಕೆಯ ವಿರುದ್ಧ ಸಂಘಟಿತ ಚಳುವಳಿ ನಡೆಸಬೇಕೆಂದು ಕೇಳಿಕೊಂಡರು. ಶ್ರೀ ಬಿ. ವಿ. ಕಕ್ಕಿಲ್ಲಾಯರು ಗಿರಣಿ ಕಾಮಗಾರರ ಸಂಘವನ್ನು ಬಲಪಡಿಸಬೇಕೆಂದು ಕಾರ್ಮಿಕರನ್ನು ಕೇಳಿಕೊಂಡರು.

ರಬಕವಿ

ಶ್ರೀ ಬಿ. ವಿ. ಕಕ್ಕಿಲ್ಲಾಯರು ಮತ್ತು ಎ೯. ಕೆ. ಉಪಾಧ್ಯಾಯರು ತಮ್ಮ ಬೆಳಗಾಂವ ಜಿಲ್ಲೆಯ ಪ್ರಚಾರ ಕಾರ್ಯ ಮುಗಿಸಿಕೊಂಡು ತಾ. 16—9—58 ಮಂಗಳವಾರ ಸಂಜೆ ರಬಕವಿಗೆ ಆಗಮಿಸಿದರು. ಮೊದಲೇ ತಿಳಿದಂತೆ ಸ್ಥಳೀಯ ಕಮ್ಯೂನಿಸ್ಟ್ ಪಾರ್ಟಿ ವತಿಯಿಂದ ಸಭೆಯ ವ್ಯವಸ್ಥೆಯನ್ನು ನಗರದ ಮುಖ್ಯ ದೇವಸ್ಥಾನದ ಸಭಾ ಪಟಾಂಗಣದಲ್ಲಿ ಧ್ವನಿವಾಹಕಗಳೊಂದಿಗೆ ಮಾಡಲಾಗಿತ್ತು. ಜನ ಕಿಕ್ಕಿರಿದು ಸೇರಿದ್ದರು. ಮುಂದಾಳುಗಳು ಬರಲು ದಾರಿಯಲ್ಲಿ ವಾಹನಗಳ ತೊಂದರೆಯಿಂದಾಗಿ ರಾತ್ರಿ ೮ ಗಂಟೆಗೆ ಆಗಮಿಸಿದರು. ಅಲ್ಲಿಯ ವರೆಗೆ ಜನ ಒಳ್ಳೇ ಉತ್ಸಾಹದಿಂದ ಕಾದು ಅವರನ್ನು ಸ್ವಾಗತಿಸಿದರು.

ಸಭೆಯ ಅಧ್ಯಕ್ಷತೆಯನ್ನು ಇಲ್ಲಿಯ ಪ್ರಮುಖ ವ್ಯಾಪಾರಿಗಳಾದ ಶ್ರೀಮಾನ್ ಜೋತಾವರ ಮಲ್ಲಪ್ಪನವರು ವಹಿಸಿದ್ದರು.

ಕಾ|| ಡಿ. ಮುರಿಗಯ್ಯನವರು, ಭಾಷಣಕಾರರ ಪರಿಚಯವನ್ನು ಮಾಡಿಕೊಟ್ಟು, ಕೇರಳದ ನಿಜಪರಿಸ್ಥಿತಿಯ ಬಗ್ಗೆ ಮಾತನಾಡಲು ಬಿನ್ನಯಿಸಿದರು. ಕಾ|| ಎನ್. ಕೆ. ಉಪಾಧ್ಯಾಯರು ಮತ್ತು ಕಾ|| ಬಿ. ವಿ. ಕಕ್ಕಿಲ್ಲಾಯರವರು ನಿರರ್ಗಳವಾಗಿ ಮಾತನಾಡಿ ಅಲ್ಲಿಯ ಒಂದೊಂದು ಕಾಯಿದೆ, ಕಾರ್ಮಿಕರ ಹಿತರಕ್ಷಣೆ, ಮುಂತಾದುವುಗಳನ್ನು ಕೇರಳ ಸರಕಾರ ಹೇಗೆ ನಿರ್ವಹಿಸುತ್ತಿದೆ ಎಂಬುದನ್ನು ತಿಳಿಸಿದಾಗ ಜನ ನಡುನಡುವೆ ಹರ್ಷೋದ್ಗಾರಗಳನ್ನು ಮಾಡುತ್ತ ಚಪ್ಪಾಳೆ ಮೂಲಕ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು. ಹೀಗೆ ಅಖಂಡವಾಗಿ ೩|| ತಾಸಿನವರೆಗೆ ಸಭಾಕಾರ್ಯ ನಡೆದರೂ ಜನ ಕೂತ ಜಾಗದಿಂದ ಅಲುಗಾಡಿದ್ದಿಲ್ಲ. ಸಭೆಗೆ ಎರಡು ಸಾವಿರಕ್ಕೂ ಮೇಲ್ಪಟ್ಟು ಜನರು ಆಗಮಿಸಿದ್ದರು.

ಕೊನೆಗೆ ರಾಷ್ಟ್ರಗೀತೆಯೊಂದಿಗೆ ಸಭಾ ಕಾರ್ಯ ಮುಗಿಯಿತು.

ಇದರಂತೆ ಬನಹಟ್ಟಿ ನಗರದಲ್ಲಿಯೂ ದಿನಾಂಕ 17ಕ್ಕೆ ಶ್ರೀ ಬಣಕಾರ ಡಾಕ್ಟರ್‌ರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಜಮಖಂಡಿಯಲ್ಲಿ ಪ್ರಚಂಡ ಸಭೆ ಜರುಗಿ ಜನಬೆಂಬಲ ಎಲ್ಲೆಲ್ಲೂ ದೊರೆಯುವುದು ಕಂಡುಬರುತ್ತಿತ್ತು. ದಿ. 19ಕ್ಕೆ ವಿಜಾಪುರಕ್ಕೆ ತೆರಳಿದರು.

ಎಲ್ಲಾ ಮರಾಠಿ

ಕರ್ನಾಟಕದ ಮುಖ್ಯ ಮಂತ್ರಿಗಳ ಶ್ರೀ ಬಿ. ಡಿ. ಜತ್ತಿಯವರ ಊರಾದ ಜಮಖಂಡಿ ನಗರದಲ್ಲಿ ಎಲ್ಲಿ ನೋಡಿದಲ್ಲಿ ಮರಾಠಿ ಬೋರ್ಡುಗಳೇ ಮೆರೆಯುತ್ತಿರುವುದನ್ನು ನೋಡಿ ಮಾನ್ಯ ಕಕ್ಕಿಲ್ಲಾಯರು ತಮ್ಮ ಆಶ್ಚರ್ಯ ಹಾಗೂ ವಿಷಾದಗಳನ್ನು ವ್ಯಕ್ತಪಡಿಸಿದರು. ಇಲ್ಲಿ ಗಣಪತಿ ಉತ್ಸವದ, ಸಿನಿಮಾ ಬೋರ್ಡುಗಳ, ಬ್ಯಾಂಕಿನ, ಹೋಟೆಲ್ ಬೋರ್ಡಿನ–ಮುಂತಾದ ಪ್ರಚಾರಗಳೆಲ್ಲ ಮರಾಠಿಯಲ್ಲಿಯೇ ಇರುತ್ತವೆ.

ಹಿರಿಯೂರು

ತಾಲ್ಲೂಕು ಕಮ್ಯೂನಿಸ್ಟ್ ಪಾರ್ಟಿಯ ಬಹಿರಂಗ ಸಭೆಯು ಚಿತ್ರದುರ್ಗ ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿಗಳಾದ ಕಾ| ಎಸ್. ಹನುಮಂತರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಾಂ| ಎಂ.ಎಸ್. ವೆಂಕಟಾಚಲಯ್ಯ ಮತ್ತು ಕಾಂ| ಎಂ. ಏಕಾಂತಯ್ಯ ಇವರುಗಳು ಪಾರ್ಟಿಯ ಧ್ಯೇಯ; ಕೆಂಪು ಬಾವುಟದ ಚಿನ್ಹೆ, ಮತ್ತು ಕಾಂಗ್ರೆಸ್ ಸರ್ಕಾರದ ದುರಾಡಳಿತ ಇವುಗಳನ್ನು ಮನಮುಟ್ಟುವಂತೆ ಹೇಳಿದರು.

ಕಾಂ| ಎಸ್. ಎಲ್. ಉಪಾಧ್ಯಾಯರು ಆಹಾರದ ಪರಿಸ್ಥಿತಿ; ಕಾಂಗ್ರೆಸ್ ಪುಢಾರಿಗಳ ದಬ್ಬಾಳಿಕೆ, ಅಧಿಕಾರಿಗಳ ಲಂಚಗೂಳಿತನ, ಕೇರಳ ಸರ್ಕಾರದ ಇಂದಿನ ನಿಜ ಸ್ಥಿತಿ, ಮತ್ತು ಹಿಂದಿನ ದಬ್ಬಾಳಿಕೆ, ಪಾರ್ಟಿಯ ಧ್ಯೇಯ ಧೋರಣೆಗಳನ್ನು ವಿವರಿಸಿದರು. ಕಾಂ| ಮುದ್ದರಂಗಪ್ಪನವರು ಮಾನ್ಯ ಅಧ್ಯಕ್ಷರಿಗೂ, ಅತಿಥಿಗಳಿಗೂ ಕೂಲಿಗಾರರ ಸಂಘದ ಪರವಾಗಿಯೂ, ರೈತ ಸಂಘದ ಪರವಾಗಿಯೂ ಮತ್ತು ನಗರ ಸಮಿತಿಯ ಪರವಾಗಿಯೂ ಫಲಪುಷ್ಪಗಳನ್ನು ಅರ್ಪಿಸಿದರು.

'ಕಮ್ಯೂನಿಸ್ಟ್ ಪಾರ್ಟಿಯೇ ಜನತೆಯ ನಿಜವಾದ ಪಕ್ಷ' ಎಂಬ ಭಾವನೆ ಬಲಗೊಳ್ಳುತ್ತಿದೆ

ಉಮ್ಮತ್ತೂರು

[ಚಾಮರಾಜನಗರ ತಾಲ್ಲೂಕು] ತಾರೀಖು 18--9—58ನೇ ಗುರುವಾರ ಈ ಊರಿನಲ್ಲಿ ಒಂದು ರೈತ ಸಂಘವನ್ನು ಮತ್ತು ಒಂದು ವಾಚನಾಲಯವನ್ನು ಸ್ಥಾಪಿಸಲಾಯಿತು. ಶ್ರೀ ನಂಜಪ್ಪನವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ವಕೀಲರೂ, ಮೈಸೂರು ಪುರಸಭಾ ಕೌನ್ಸಿಲರೂ ಆದ ಶ್ರೀ ಸೋಮಸುಂದರ ಶರ್ಮ, ಬಿ.ಎ ಎಲ್.ಎಲ್.ಬಿ.

(೮ನೇ ಪುಟ ನೋಡಿ)

ಕನಿಷ್ಠ ಕೂಲಿಗಾಗಿ ಬೆಂಗಳೂರಿಗೆ ಕಾಲ್ನಡಿಗೆಯ ಜಾಥಾ

ಮಂಗಳೂರು

ಮಂಗಳೂರಿನ ಗೋರಿಗುಡ್ಡ ಮತ್ತು ಕದ್ರಿ ಪ್ರದೇಶಗಳ ಬೀಡಿ ಮಜೂರರ ಸಭೆಗಳು ತಾ. 14-9-58ರಂದು ಸೇರಿ ಬೀಡಿ ಮಜೂರರ, ಸರಕಾರದ ಮುಂದಿಟ್ಟಿರುವ ಕನಿಷ್ಠ ಕೂಲಿಯಾಗಿ ಸಾವಿರ ಬೀಡಿಗೆ ರೂ. 2 ನಿರ್ಣಯಿಸಬೇಕು ಮತ್ತು ಬೀಡಿ ಮಜೂರರ ಹಿತರಕ್ಷಿಸುವ ಕಾನೂನು ರಚಿಸಬೇಕೆಂಬ ಕೇಳಿಕೆಗಳ ವಿಚಾರದಲ್ಲಿ ಈವರೆಗೆ ಯಾವೊಂದು ಕ್ರಮವನ್ನೂ ಕೈಕೊಳ್ಳದ ಮೈಸೂರು ಸರಕಾರದ ನೀತಿಯ ಬಗ್ಗೆ ವಿಷಾದ ಸೂಚಿಸಿ ಈ ಬಗ್ಗೆ ಸರಕಾರವನ್ನು ಒತ್ತಾಯಪಡಿಸಲು ಬೆಂಗಳೂರಿನಲ್ಲಿ ಸೆಕ್ರಟಾರಿಯೇಟ್‌ನ ಮುಂದೆ ಮತಪ್ರದರ್ಶನ ನಡೆಸಲು ನವೆಂಬರ್ ತಿಂಗಳಲ್ಲಿ ಮಂಗಳೂರಿನಿಂದ ಕಾಲ್ನಡೆ ಜಾಥಾವೊಂದನ್ನು ಕಳುಹಿಸುವ ಯೂನಿಯನಿನ ತೀರ್ಮಾನಕ್ಕೆ ತನ್ನ ಸಂಪೂರ್ಣ ಬೆಂಬಲವನ್ನು ಸೂಚಿಸುವ ಠರಾವನ್ನು ಸ್ವೀಕರಿಸಿ ಸರಕಾರಕ್ಕೆ ಕಳುಹಿಸಿಕೊಡಲಾಯ್ತು.

ಗೋರಿಗುಡ್ಡೆಯಲ್ಲಿ ಸೇರಿದ ಸಭೆಯ ಅಧ್ಯಕ್ಷತೆಯನ್ನು ಶ್ರೀ ಕೆ. ಪಿ. ಸಾಲಿಯಾನರೂ ಕದ್ರಿಪ್ರದೇಶದ ಸಭಾಧ್ಯಕ್ಷತೆಯನ್ನು ಶ್ರೀ ಶೀನ ಜೋಗಿಯವರೂ ವಹಿಸಿದ್ದರು. ಯೂನಿಯನಿನ ತೀರ್ಮಾನಗಳನ್ನು ವಿವರಿಸಿ ಶ್ರೀ ಕೆ. ಮೋನಪ್ಪ ಶೆಟ್ಟಿ, ಯು. ಕೃಷ್ಣ ಮೊದಲಾದವರು ಸಭೆಯಲ್ಲಿ ಮಾತನಾಡಿದರು.

ಬಂಟ್ವಾಳ: ತಾ 20-9-58ರಂದು ಇಲ್ಲಿಯ ಹೊಸಪೇಟೆಯಲ್ಲಿರುವ ಶ್ರೀ ಹರಿ ಪೈಯವರ ಮಾಳಿಗೆಯಲ್ಲಿ ಬೀಡಿ ಮಜೂರರ ಮಹಾ ಸಭೆಯು ಶ್ರೀ ಬಿ. ವೀರಪ್ಪ ಸಾಲಿಯಾನರ ಅಧ್ಯಕ್ಷತೆಯಲ್ಲಿ ಜರುಗಿತು. ಸ್ತ್ರೀ ಮಜೂರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಬಂಟ್ವಾಳ ಬೀಡಿ ಲೇಬರ್ ಯೂನಿಯನ್ನಿನ ಅಧ್ಯಕ್ಷ ಶ್ರೀ ಬಿ. ಎಚ್. ಬಂಗೇರರು ಬೀಡಿ ಮಜೂರರ ಚಳುವಳಿಯ ಹಾಗೂ ಸಂಘದ ಚಟುವಟಿಕೆಯ ವರದಿಯಿತ್ತರು. ಅನಂತರ ಎಸ್. ಕೆ. ಟಿ. ಯು. ಸಿ. ಕಾರ್ಯದರ್ಶಿ ಶ್ರೀ ಮೋನಪ್ಪ ಸೆಟ್ಟರು ಸಭೆಯಲ್ಲಿ, ಜಿಲ್ಲೆಯ ಬೀಡಿ ಮಜೂರ ಸಂಘಗಳ ಪ್ರತಿನಿಧಿ ಸಭೆಯಲ್ಲಿ ಆದ ನಿರ್ಣಯಗಳ ಕುರಿತು ಭಾಷಣವಿತ್ತರು. ಬೀಡಿ ಮಜೂರರಿಗೆ ಕನಿಷ್ಠ ವೇತನ ನಿರ್ಣಯಿಸಿ ಬೀಡಿ ಮಜೂರರ ಹಿತರಕ್ಷಣಾ ಕಾನೂನು ರಚಿಸುಬೇಕೆಂದು ಮೈಸೂರು ಸರಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಶ್ರೀ ಅಮ್ಮು ಶೆಟ್ಟರು ಸಭೆಯ ಮುಂದಿರಿಸಿದರು. ಶ್ರೀ ಬಿ.ಎಚ್. ಬಂಗೇರರು ಅವನ್ನು ಅನುಮೋದಿಸಿದರು ಸರ್ವಾನುಮತದಿಂದ ಠರಾವನ್ನು ಅಂಗೀಕರಿಸಲಾಯ್ತು.


ಸಂತಾಪ ಸೂಚನೆ

ಬಂಟ್ವಾಳ ಪ್ರದೇಶದ ಮಜೂರರಿಗೆ ಪ್ರತಿ ಶನಿವಾರವೆ ಮಜೂರಿಯನ್ನು ಕೊಡಬೇಕೆಂದು ಒತ್ತಾಯಿಸುವ ನಿರ್ಣಯವಾಯಿತು. ಪೈವಳಿಕೆ ಕೊಲೆ ಪ್ರಕರಣದಲ್ಲಿ ಮೃತರಾದವರ ಬಗ್ಗೆ ದುಃಖ ಸೂಚಿಸುವ, ಮತ್ತು ಯೂನಿಯನಿನ ಉತ್ಸಾಹಿ ಕಾರ್ಯಕರ್ತೆಯಾಗಿದ್ದ ಜಕ್ರಿ ಬೆಟ್ಟುಪ್ರದೇಶ ಶಾಂತಕ್ಕ ಎಂಬವರ ಅಕಾಲ ಮೃತ್ಯುವಿನ ಬಗ್ಗೆ ದುಃಖ ಸೂಚಿಸುವ ನಿರ್ಣಯಗಳಾಗಿ ಸಭೆಯಲ್ಲಿ ಎರಡು ನಿಮಿಷ ಎದ್ದು ನಿಂತು ಮೌನ ಆಚರಿಸಲಾಯಿತು.

ಮಂಗಳೂರು: ದ. ಕ. ಜಿಲ್ಲಾ ಟಿಂಬರ್ ಎಂಡ್ ಮಿಲ್ ವರ್ಕ‍ರ್ಸ್ ಯೂನಿಯನಿನ ಮಹಾಸಭೆಯು ತಾ. 19-9-58 ರಂದು ಶ್ರೀ ಎ. ಶಾಂತಾರಾಂ ಪೈಯವರ ಅಧ್ಯಕ್ಷತೆಯತೆ ಸೇರಿತ್ತು. ಕಾರ್ಯದರ್ಶಿಯವರು ಸಭೆ ಕರೆದ ಉದ್ದೇಶವನ್ನು ವಿವರಿಸಿದರು. ಪ್ರಥಮವಾಗಿ ಎಸ್. ಕೆ. ಟಿ. ಯು. ಸಿ. ಯ ತೀರ್ಮಾನದ ಬಗ್ಗೆ ಅಧ್ಯಕ್ಷರು ವಿವರಿಸಿದನಂತರ ಸಮ್ಮೇಳನವನ್ನು ತಾ. 16—11—58 ರಂದು ಜರುಗಿಸಬೇಕೆಂದೂ, ಸಮ್ಮೇಳನ ನಡೆಸಲು ಕಾರ್ಯಕಾರಿ ಸಮಿತಿಯ ಸದಸ್ಯರನ್ನೇ ನಿಯಮಿಸಲಾಯಿತು. ಕೇಳಿಕೆಗಳ ಬಗ್ಗೆ ಚರ್ಚಿಸಿ ಈ ಕೆಳಗಿನಂತೆ ತೀರ್ಮಾನವಾಯಿತು.

1. ಕನಿಷ್ಠ ಕೂಲಿ ಎರಡು ರೂಪಾಯಿಗಿಂತ ಕಡಿಮೆ ಇರಕೂಡದು.
2. ಈಗಿರುವ ಸಂಬಳಕ್ಕಿಂತ ಶೇ. 25 ಹೆಚ್ಚಳವಾಗಬೇಕು.
3. ಸ್ಕೇಲ್ ನಿರ್ಣಯವಾಗಬೇಕು.
4. ಮೂರು ತಿಂಗಳ ಬೋನಸ್ಸು ಸಿಗಬೇಕು.
5. ಕಂಪೆನಿಯಲ್ಲಿ ದುಡಿಯುವ ಎಲ್ಲಾ ಮಜೂರರಿಗೆ ಫ್ಯಾಕ್ಟರಿ ಕಾನೂನು ಅನ್ವಯಿಸತಕ್ಕದ್ದು.
6. ರಾಷ್ಟ್ರೀಯ ದಿನಗಳಿಗೆ ಮತ್ತು ಹಬ್ಬಗಳಿಗೆ ಸಂಬಳಸಹಿತ ರಜೆ ಸಿಗಬೇಕು.
7. ಪ್ರಾವಿಡೆಂಟ್ ಫಂಡ್ ಜಾರಿಯಾಗಬೇಕು.

ಈ ಕೇಳಿಕೆಗಳು ಸರ್ವಾನುಮತದಿಂದ ಮಂಜೂರಾದುವು. ಅನಂತರ ಯೂನಿಯನಿನ ಸದಸ್ಯನಾದ ಶ್ರೀ ಕೃಷ್ಣಾ ಮಿಲ್‌ನಲ್ಲಿ ದುಡಿಯುವ ಮಜೂರನಾದ ಶ್ರೀ ಚೆನ್ನಪ್ಪನವರ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು. ಇವರ ಅಗಲುವಿಕೆಯಿಂದಾಗಿ ಇವರ ಬಂಧುಗಳಿಗೆ ಉಂಟಾದ ದುಃಖದಲ್ಲಿ ಯೂನಿಯನಿನ ಸದಸ್ಯರು ನಾವು ಕೂಡಾ ಸಹ ಭಾಗಿಗಳಾಗಿದ್ದೇವೆ. ಇದಾನಂತರ ಧನ್ಯವಾದಗಳೊಂದಿಗೆ ಸಭೆ ಮುಕ್ತಾಯವಾಯಿತು.



ಜನರು ಬದುಕುವ ಮನೆಗಳು

(೫ನೇ ಪುಟದಿಂದ)

ಲೂ ಹೆಚ್ಚಿಲ್ಲದ ಮನೆಯನ್ನು, ವೈಯಕ್ತಿಕವಾಗಿ, ಮಾಲೀಕನಾಗಿ ಪಡೆದಿರಲು ಹಕ್ಕಿರುತ್ತದೆ. ಮನೆಯನ್ನು ವರಮಾನಕ್ಕೆ ಸಾಧನವಾಗಿ ಮಾಡಿಕೊಳ್ಳದಿರಬೇಕೆಂಬ ಉದ್ದೇಶದಿಂದಲೇ ಈ ಮಿತಿಯನ್ನು ಹಾಕಲಾಗಿದೆ.

ಖಾಸಗೀ ಮನೆಗಳನ್ನು ಕಟ್ಟಿಕೊಳ್ಳುವ ಜನರಿಗೆ ರಾಜ್ಯವು ವಿಸ್ತೃತವಾದ ಸಹಾಯವನ್ನು ನೀಡುತ್ತದೆ. ವಿಶೇಷತಃ ಅನುಕೂಲವಾದ ಷರತ್ತುಗಳ ಮೇಲೆ ಅವರಿಗೆ ೧೦—೧೫ ಸಾವಿರ ರೂಬಲ್ಲುಗಳಷ್ಟು ದೀರ್ಘ ಕಾಲಾವಧಿಯ ಸಾಲಗಳನ್ನೂ ಸಹ ಕೊಡಲಾಗುತ್ತದೆ. ಖಾಸಗೀ ಮನೆಯ ಮಾಲಕನೂ, ತನ್ನ ಮನೆಯ ದುರುಸ್ತಿಗಳ ಸಲುವಾಗಿ ಬ್ಯಾಂಕಿನಿಂದ ಮೂರು ಸಾವಿರ ರೂಬಲ್ಲುಗಳಷ್ಟರ ವರೆಗಿನ ಸಾಲವನ್ನು ಪಡೆಯುವುದು ಸಾಧ್ಯವಿದೆ. ಮೂರು ವರ್ಷಗಳ ಕಾಲಾವಧಿಯಲ್ಲಿ ಈ ಸಾಲವನ್ನು ತೀರಿಸಬಹುದು.

ಖಾಸಗೀ ಮನೆಗಳ ನೆಲದ ಬಾಡಿಗೆ

ಖಾಸಗೀ ಮನೆಗಳ ಮಾಲಕರು ತಮ್ಮ ವಶದಲ್ಲಿರುವ ಭೂಮಿಯ ಬಳಕೆಯ ಸಲುವಾಗಿ ರಾಜ್ಯಕ್ಕೆ ಬಾಡಿಗೆಯನ್ನು ಸಲ್ಲಿಸುತ್ತಾರೆ. ಈ ಬಾಡಿಗೆಯ ಪ್ರಮಾಣವು ವರ್ಷವೊಂದಕ್ಕೆ ಪ್ರತಿ ಚದರ ಮೀಟರಿಗೂ ೪ರಿಂದ ಹಿಡಿದು ೧೮ ಕೋಪೆಕ್ಕುಗಳ ವರೆಗೆ, ನಿವೇಶನವಿರುವ ಸ್ಥಳಕ್ಕೆ ತಕ್ಕಂತೆ ಇರುತ್ತದೆ. ನಗರಗಳಲ್ಲಿ ಇಂಥ ತುಂಡು ಭೂಮಿಗಳ ವಿಸ್ತೀರ್ಣವು ೬೦೦ ಚದರ ಮೀಟರುಗಳಿಗಿಂತಲೂ ಹೆಚ್ಚಾಗಿರುವುದಿಲ್ಲ. ಆದರೆ ನಗರ ವಿಸ್ತರಣಗಳಲ್ಲಿ ತುಂಡು ಭೂಮಿಗಳ ಕ್ಷೇತ್ರ ೧,೨೦೦ ಚದರ ಮೀಟರುಗಳಷ್ಟು ದೊಡ್ಡದಾಗಿಯೂ ಇರಬಹುದು.

ಒಂದು ಮನೆಯ ಮಾಲೀಕನು ತನ್ನ ಮನೆಯನ್ನು ಮಾರುವುದು ಸಾಧ್ಯವಿದೆ. ಅದನ್ನು ಬಳುವಳಿಯಾಗಿ ಕೊಡಬಹುದು. ತನ್ನ ವಾರಸುದಾರರಿಗೆ ಕೊಡುವುದೂ ಸಾಧ್ಯವಿದೆ. ಖಾಸಗೀ ವ್ಯಕ್ತಿಗಳಿಗಾಗಲೀ, ರಾಜ್ಯ ಸಂಸ್ಥೆಗಳಿಗಾಗಲೀ ಅಥವಾ ಸಾರ್ವಜನಿಕ ಸಂಸ್ಥೆಗಳಿಗೂ ಕೂಡ ತನ್ನ ಮನೆಯನ್ನು ಬಾಡಿಗೆಗೆ ಕೊಡಬಹುದು. ಆದರೆ ಈ ರೀತಿಯಾಗಿ ಆತನು ಪಡೆಯುವ ಬಾಡಿಗೆಯು ಮಾತ್ರ, ಇದೇ ಮಾದರಿಯ, ರಾಜ್ಯದ ಒಡೆತನಕ್ಕೆ ಸೇರಿರುವ ಮನೆಗಳಿಗಿರುವ ನಿಗದಿಯಾದ ಬಾಡಿಗೆಗಿಂತಲೂ ಸ್ವಲ್ಪ ಮಾತ್ರವೂ ಸರ್ವಥಾ ಹೆಚ್ಚಿರಕೂಡದು.

—ವಿ. ಪಾರಫೆಯೋವ್

ಉಮ್ಮತ್ತೂರು:—

(೭ನೇ ಪುಟದಿಂದ)

ಅವರು ರೈತ ಸಂಘದ ಮತ್ತು ವಾಚನಾಲಯದ ಅಗತ್ಯವನ್ನು ಕುರಿತು ಭಾಷಣ ಮಾಡಿದರು.

ಶ್ರೀ ಕೆ. ಕೆಂಪಣ್ಣ, ಎಲ್. ಮುದ್ದೇಗೌಡ, ಸಣ್ಣಶೆಟ್ಟಿ, ನಾರಾಯಣಶೆಟ್ಟಿ, ಪುಟ್ಟಶಿದ್ದಯ್ಯ, ನಂಜುಂಡಶೆಟ್ಟಿ ಈ ಆರು ಜನರನ್ನುಳ್ಳ ಒಂದು ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ನಂತರ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಕಾರವಾರದಲ್ಲಿ ಶೀತಾಗಾರವಿಲ್ಲದೆ ಮೀನುಗಳು ವ್ಯರ್ಥ ಹಾಳಾಗುತ್ತಿವೆ

ಸಂಪಾದಕರಿಗೆ ಪತ್ರಗಳು

ಕಾರವಾರದಲ್ಲಿ ಐಸ್ ಫೇಕ್ಟರಿಯಾಗಬೇಕೆಂದು ಅನೇಕ ದಿನಗಳಿಂದ ಪ್ರಯತ್ನ ಪಡಲಾಗುತ್ತಿದೆ.

ಕಳೆದ ಜುಲೈ ತಿಂಗಳ ಮೊದಲನೇ ವಾರದಲ್ಲಿ ಕಷ್ಟಪಟ್ಟು ದೊಡ್ಡ ಗಾತ್ರದಲ್ಲಿ ಮೀನುಗಳನ್ನು ಹಿಡಿದು ಕಾರವಾರ ಪೇಟೆಗೆ ಬೇಕಾಗುವಷ್ಟನ್ನು ಉಳಿಸಿಕೊಂಡು ವ್ಯಾಪಾರಿಗಳ ಮೂಲಕ ಒಳನಾಡಿನ ಬೆಳಗಾವಿ ಹಾಗೂ ಹುಬ್ಬಳ್ಳಿ ಪೇಟೆಗಳಿಗೂ ಕಳುಹಿಸಲಾಯಿತು. ಹೀಗಾಗಿಯೂ:ಸಿಲ್ಲಕು ಉಳಿದುದನ್ನು ಏನು ಮಾಡುವುದು? ಏನೂ ಮಾಡಲಿಲ್ಲ. ಸಮುದ್ರ ಕಿನಾರೆಯಲ್ಲಿ ತಗ್ಗು ತೋಡಿ ಮಣ್ಣು ಮಾಡಲಾಯಿತು. ಊರಿನ ರೈತರು ತಲೆಹೊರೆ ಬುಟ್ಟಿಗೆ ೮ ಆಣೆ ಕೊಟ್ಟು ಕಾಯಿಪಲ್ಲೆ ಬೆಳೆಸಲು ಗೊಬ್ಬರಕ್ಕೆಂದು ಕೊಂಡುಕೊಂಡರು.

ಮೀನು ಇಂದು ಆಹಾರದಲ್ಲಿ ಎರಡನೆಯ ಸ್ಥಾನವನ್ನು ಪಡೆದಿದೆಯಲ್ಲದೆ ಅದೊಂದು ಸಂಪತ್ತಿನ ಮೂಲವಾಗಿರುವದೂ ಅಷ್ಟೇ ನಿಜವಾಗಿದೆ. ಹೀಗಿರುವಾಗ ವ್ಯರ್ಥವಾಗಿ ಮೀನು ಇಲ್ಲಿ ಹಾಳಾಗುತ್ತಿದೆ. ಹಿಡಿದ ಮೀನನ್ನು ಜೋಪಾನವಾಗಿಟ್ಟುಕೊಂಡು ಅವುಗಳ ಪ್ರಯೋಜನ ಪಡೆಯಬೇಕಾದರೆ ಐಸ್ ಫೇಕ್ಟರಿ ಅಗತ್ಯವಾಗಿದೆ.

ಹಗಲು ರಾತ್ರಿ ಸಮುದ್ರ ಕಿನಾರೆಯಲ್ಲಿ ಕಾದು ಕುಳಿತು ಮೀನನ್ನು ಹಿಡಿಯುವ ಮೀನುಗಾರರಿಗೆ ಮೇಲಿನಂಥ ಪ್ರತಿಫಲ ದೊರೆತರೆ ಮೀನುಗಾರರಾಗಲಿ, ಆ ಉದ್ಯಮವಾಗಲಿ ಹೇಗೆ ಮುಂದೆ ಬಂದೀತು? ಶೀತಾಗಾರಗಳಲ್ಲಿ ಮೀನುಗಳನ್ನು ಬೇಕಾದಷ್ಟು ದಿನ ಕಾಪಾಡಿಟ್ಟುಕೊಂಡು ಬೇಕಾದಲ್ಲಿಗೆ ಬೇಕಾದಾಗ ಕಳುಹಿಸಬಹುದು.

ಇಂಥ ಶೀತಾಗಾರಕ್ಕೆಂದೇ ನಮ್ಮ ಸರ್ಕಾರ ಯೋಜಿಸಿದೆ ಮತ್ತು ಮೀನುಗಾರರಿಂದಲೂ ಸಂಘ ಸಂಸ್ಥೆಗಳಿಂದಲೂ ಶೇರು ಬಂಡವಾಳದ ಹಣವನ್ನೂ ಕೂಡಿಸಲಾಯಿತು. ಆದರೆ ಕಾರ್ಯ ಮಾತ್ರ ಆರಂಭವಾಗಲಿಲ್ಲ. ಕಾರಣವೇನು? ಸ್ಥಳವಿಲ್ಲವೆ? ಫಿಶರೀಸ್ ರೀಸರ್ಚ್ ಕಂಪೌಂಡಿನ ಲಗ್ತ ದಕ್ಷಿಣ ಮತ್ತು ಪೂರ್ವ ಬದಿಗೆ ಸಾಕಾಗುವಷ್ಟು ಜಾಗೆ ಇದೆ. ಅದನ್ನೇ ಐಸ್ ಫೇಕ್ಟರಿಗೆ ಯಾಕೆ ಉಪಯೋಗಿಸಬಾರದು? ಆದ್ದರಿಂದ ಮೀನುಗಾರಿಕೆಯ ಮಂತ್ರಿವರ್ಯರೂ ಮೇಲಾಧಿಕಾರಿಗಳೂ ಇತ್ತ ಲಕ್ಷ್ಯ ಕೊಟ್ಟು ಮೀನುಗಾರರ ಕಷ್ಟ ನಷ್ಟಗಳನ್ನು ಪರಿಹರಿಸಬೇಕು, ಬರ್ಫ ಕಾರ್ಖಾನೆಯನ್ನು ಸ್ಥಾಪಿಸಿ ಮೀನುಗಾರಿಕೆಯ ಉದ್ಯೋಗವನ್ನು ಬೆಳೆಸಿ ಕನ್ನಡ ನಾಡಿನ ಅಭಿವೃದ್ಧಿಯನ್ನು ಕೈಕೊಳ್ಳಬೇಕು.

ಓರ್ವ ಮೀನುಗಾರ, ಕಾರವಾರ.

ವಾರದ ವಾರ್ತಾ ಸಮೀಕ್ಷೆ

(೨ನೇ ಪುಟದಿಂದ)

ಗಳ ಬಗ್ಗೆ ಮಾಹಿತಿ ಬರುವವರೆಗೆ ಚರ್ಚೆ ಇಲ್ಲವೆಂದು ಸಭಾಧ್ಯಕ್ಷರು ತಿಳಿಸಿದ್ದಾರೆ.

ನ್ಯಾಯ ಮತ್ತು ಶಿಸ್ತು ಪರಿಪಾಲನೆಯ ಪ್ರಶ್ನೆಯು ಸಂಪೂರ್ಣವಾಗಿ ರಾಜ್ಯ ಸರಕಾರಕ್ಕೆ ಸಂಬಂಧಿಸಿದ್ದರಿಂದ ಅದನ್ನು ಲೋಕಸಭೆಯಲ್ಲಿ ಚರ್ಚಿಸುವುದು ಅನುಚಿತ ಅಷ್ಟೇ ಅಲ್ಲದೆ ಅದು ಎಲ್ಲ ಪ್ರಜಾಪ್ರಭುತ್ವ ಸಂಪ್ರದಾಯಗಳನ್ನು ಮುರಿಯುವಂಥದ್ದಾಗಿದೆ. ಕೇರಳವನ್ನಷ್ಟೇ ಪ್ರತ್ಯೇಕಿಸಿ ಚರ್ಚಿಸುವುದು ಅನುಚಿತವಷ್ಟೇ ಅಲ್ಲದೆ, ಭೇದವೆಣಿಸುವುದೂ ಆಗಿದೆ. ಸಂಬಂಧಪಟ್ಟ ಸರಕಾರಕ್ಕೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶವಿಲ್ಲದ ಸಭೆಯಲ್ಲಿ ಚರ್ಚಿಸುವುದು ರಾಜ್ಯಾಂಗಕ್ಕೆ ತೀವ್ರವಾದ ಅನ್ಯಾಯವಾಗಿದೆ.

ಮುಖ್ಯ ಮಂತ್ರಿ ಇ. ಎಂ. ಎಸ್. ನಂಬೂದ್ರಿಪಾದ್‌ರವರು ಗೃಹ ಸಚಿವ ಪಂತ್‌ರವರಿಗೆ ಈ ಬಗ್ಗೆ ಕಳಿಸಿರುವ ತಂತಿಯಲ್ಲಿ ಲೋಕಸಭೆಯಲ್ಲಿ ಅಂಥ ಚರ್ಚೆಯನ್ನು ವಿರೋಧಿಸಿದ್ದಾರೆ. ಲೋಕಸಭೆಯಲ್ಲಿ ಕಮ್ಯೂನಿಸ್ಟ್ ಪಕ್ಷದ ಸದಸ್ಯರುಗಳು ಕೇರಳ ರಾಜ್ಯವೊಂದೇ ಅಲ್ಲದೆ ಇತರ ರಾಜ್ಯಗಳಲ್ಲಿನ ಪರಿಸ್ಥಿತಿಯನ್ನೂ ಸಹ ಚರ್ಚಿಸಬೇಕೆಂದು ಅಭಿಪ್ರಾಯ ವ್ಯಕ್ತಗೊಳಿಸಿದ್ದಾರೆ

ಮುಖ್ಯ ಮಂತ್ರಿ ಇ.ಎಂ.ಎಸ್.ರವರು ಗೃಹ ಸಚಿವರಿಗೆ ಕಳಿಸಿದ್ದ ತಂತಿಯ ವಿಷಯದಲ್ಲಿ ಲೋಕಸಭಾ ಸದಸ್ಯರ ಹಕ್ಕು ಬಾಧ್ಯತೆಯ ಪ್ರಶ್ನೆಗೆ ಧಕ್ಕೆ ಬಂದಿದೆಯೆಂದು ಎಂ. ಆರ್. ಮಸಾನಿ ಒಂದು ನಿಲುವಳಿ ಸೂಚನೆ ತಂದಿದ್ದಾರೆ. ಪ್ರತಿಗಾಮಿ ಶಕ್ತಿಗಳು ಮತ್ತು ಪ್ರಸಪಾ ಹಾಗೂ ಕಾಂಗ್ರೆಸ್ ಪಕ್ಷಗಳು ಕೇರಳ ಸರಕಾರದ ವಿರುದ್ಧವಾಗಿ ಅಪಪ್ರಚಾರ ನಡೆಸಲು ಸರ್ವಪ್ರಯತ್ನವನ್ನೂ ನಡೆಸುತ್ತಿರುವುದು ಇದರಿಂದ ಗೋಚರವಾಗುತ್ತದೆ.

ವಿಶ್ವಸಂಸ್ಥೆಯ ಮಹಾಧಿವೇಶನ

ವಿಶ್ವಸಂಸ್ಥೆಯ ಹದಿಮೂರನೆಯ ಮಹಾಧಿವೇಶನ ಕಳೆದವಾರ ನ್ಯೂಯಾರ್ಕಿನಲ್ಲಿ ಆರಂಭವಾಗಿದೆ. ಈಗಾಗಲೇ ಅಧಿವೇಶನದ ಕಾರ್ಯಕ್ರಮದ ಪಟ್ಟಿ ಸಿದ್ಧವಾಗಿದೆ. ಮಧ್ಯಪ್ರಾಚ್ಯ, ಪೂರ್ವ ಏಷ್ಯ, ನಿಶ್ಶಸ್ತ್ರೀಕರಣ, ವಸಾಹತು ನಿರ್ಮೂಲನ, ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿ ಮುಂತಾದ ಹಲವಾರು ವಿಷಯಗಳು ಅಧಿವೇಶನದ ಮುಂದೆ ಬರಲಿದೆ.

ಎಂದಿನಂತೆ ಈ ಅಧಿವೇಶನದಲ್ಲೂ ಸಹ ಭಾರತ ಸರಕಾರ ಜನತಾ ಚೀಣದ ಪ್ರಾತಿನಿಧ್ಯದ ಪ್ರಶ್ನೆಯನ್ನು ಮಂಡಿಸಿದೆ. ಅಧಿವೇಶನಕ್ಕೆ ಕಾರ್ಯಕ್ರಮವನ್ನು ಸಿದ್ಧಗೊಳಿಸಿದ ನ್ಯಾಯ ಸಮಿತಿಯಲ್ಲಿ ಭಾರತದ ಸೂಚನೆಯು ಅಮೇರಿಕ ಮತ್ತು ಹಿಂಬಾಲಕ ರಾಷ್ಟ್ರಗಳ ವಿರೋಧದಿಂದ ಒದ್ದು ಹೋಯಿತು.

ಈಗ ಮತ್ತೆ ಆ ಪ್ರಶ್ನೆಯನ್ನು ಅಧಿವೇಶನದ ಮುಂದೆ ತರಲಾಗಿದೆ. ಅಮೇರಿಕ ಮತ್ತು ಹಿಂಬಾಲಕ ರಾಷ್ಟ್ರಗಳು ಯಥಾಪ್ರಕಾರ ಚೀಣದ ಪ್ರಾತಿನಿಧ್ಯವನ್ನು ವಿರೋಧಿಸಲು ಸಿದ್ಧಮಾಡಿಕೊಳುತ್ತಿವೆ. ೬೦೦ ಮಿಲಿಯ ಜನತೆಯನ್ನು ಪ್ರತಿನಿಧಿಸುವ ಜನತಾ ಚೀಣಕ್ಕೆ ಮಾನ್ಯತೆ ಕೊಡದಿರುವುದು ಶುದ್ಧ ಮೂರ್ಖತನವಾಗಿದೆ. ಅಮೇರಿಕವು ಭಂಡತನದ ನೀತಿಯನ್ನನುಸರಿಸುತ್ತಿದೆ. ಈ ಬಾರಿ ಭಾರತದ ಸೂಚನೆಗೆ ಹೆಚ್ಚಿನ ರಾಷ್ಟ್ರಗಳು ಬೆಂಬಲಕೊಡುವ ನಿರೀಕ್ಷೆ ಇದೆ. ಜನತಾ ಚೀಣಕ್ಕೆ ಮನ್ನಣೆ ಕೊಡದಿದ್ದಲ್ಲಿ, ನಿಶ್ಶಸ್ತ್ರೀಕರಣದ, ಪ್ರಶ್ನೆ ಇತ್ಯರ್ಥವಾಗಿ, ವಿಶ್ವಶಾಂತಿ ಏರ್ಪಡುವ ಭವಿಷ್ಯ ಇಲ್ಲವೇ ಇಲ್ಲವಾಗಿದೆ. ಜನತಾ ಚೀಣಕ್ಕೆ ವಿಶ್ವಸಂಸ್ಥೆಯಲ್ಲಿ ನ್ಯಾಯವಾದ ಸ್ಥಾನಸಲ್ಲಬೇಕೆಂದು ವಿಶ್ವದ ಪ್ರಜಾಪ್ರಭುತ್ವ ಶಕ್ತಿಗಳು ಪ್ರಬಲವಾದ ಒತ್ತಾಯ ತರಬೇಕಿದೆ.

ಆಲ್ಜೀರಿಯ ಸ್ವತಂತ್ರ ಸರಕಾರದ ಸ್ಥಾಪನೆ

ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿರುವ ಕ್ರಾಂತಿಕಾರೀ ಯೋಧರು, ಕೈರೋ ನಗರದಲ್ಲಿ ಆಲ್ಜೀರಿಯದ ಸ್ವತಂತ್ರ ಸಾರ್ವಭೌಮ ಸರಕಾರದ ಸ್ಥಾಪನೆಯನ್ನು ಘೋಷಿಸಿದೆ. ಫರ್ಹಾತ್ ಅಬ್ಬಾಸ್‌ರವರ ನೇತೃತ್ವದಲ್ಲಿ ಸ್ಥಾಪಿತವಾಗಿರುವ ಈ ಸರಕಾರಕ್ಕೆ ಅರಬ್ ರಾಷ್ಟ್ರಗಳು ಮನ್ನಣೆ ಇತ್ತಿವೆ.

ಇದು ಅಲ್ಜೀರಿಯದ ಸ್ವಾತಂತ್ರ ಹೋರಾಟದಲ್ಲಿ ಹೊಸ ಪುಟವನ್ನು ತೆರೆದಿದೆ. ಇನ್ನೂ ಅನೇಕ ರಾಷ್ಟ್ರಗಳು ಈ ಸರಕಾರಕ್ಕೆ ಮನ್ನಣೆ ಈಯುವ ನಿರೀಕ್ಷೆಯಿದೆ. ಫ್ರಾನ್ಸ್‌ನ ಪ್ರಧಾನಿ ಜನರಲ್ ಡಿಗಾಲ್‌ರವರು ತಮ್ಮ ನೂತನ ಘಟನೆಯನ್ನು ಜನತೆಯ ಮುಂದೆ ತೀರ್ಪಿಗಾಗಿ ಮಂಡಿಸಲಿರುವ ಪೂರ್ವದಲ್ಲಿ ಈ ಘಟನೆ ಸಂಭವಿಸಿರುವುದು ಗಮನೀಯವಾಗಿದೆ. ಇದರಿಂದಾಗಿ ಅಲ್ಜೀರಿಯದ ಸ್ವಾತಂತ್ರ್ಯ ಹೋರಾಟವನ್ನು ತುಳಿದು ಅಲ್ಜೀರಿಯವನ್ನು ತಮ್ಮ ವಸಾಹತಾಗಿ ಮುಂದುವರಿಸುವ ಫ್ರೆಂಚ್ ಸಾಮ್ರಾಜ್ಯಶಾಹಿಯ ಕನಸಿಗೆ ಧಕ್ಕೆ ತಗುಲಿದಂತಾಗಿದೆ. ಏಷ್ಯ ಆಫ್ರಿಕಾ ರಾಷ್ಟ್ರಗಳು ಮತ್ತು ಸೋವಿಯತ್ ಯೂನಿಯನ್ ಹಾಗೂ ಇತರ ಪೂರ್ವ ಯೂರೋಪ್ ರಾಷ್ಟ್ರಗಳು ಮತ್ತು ದಕ್ಷಿಣ ಅಮೇರಿಕದ ಮೂರು ರಾಷ್ಟ್ರಗಳು ಹೊಸ ಸರಕಾರಕ್ಕೆ ಮನ್ನಣೆ ಈಯುವ ನಿರೀಕ್ಷೆ ಇದೆ.

ನೂತನ ಸರಕಾರ ಅಸ್ತಿತ್ವಕ್ಕೆ ಬಂದ ಕೂಡಲೇ ಫ್ರಾನ್ಸಿನ ಮೇಲೈ ಆಲ್ಜೀರಿಯವು ಯುದ್ಧ ಸಾರುವ ಪರಿಸ್ಥಿತಿಯಲ್ಲಿದೆ ಎಂದು ಘೋಷಿಸಲಾಗಿದೆ.

ನೀವೇನು ಹೇಳುತ್ತೀರಿ ?

(೪ನೇ ಪುಟದಿಂದ)

ಗಳ ಬಗ್ಗೆ ದೂರಿತ್ತಿದ್ದರೂ ಅದೆಲ್ಲೂ ಗುಲ್ಲಾಗುವುದಿಲ್ಲ, ಪ್ರಕಟವಾಗುವುದಿಲ್ಲ

ಹೈಕಮಾಂಡಿಗೆ ದೂರಿತ್ತಿರುವವರು ಶ್ರೀ ಜಿ. ಲಚ್ಚಣ್ಣ ಮತ್ತು ಕೆ. ಓಬುಳ ರೆಡ್ಡಿ ಅವರುಗಳಾಗಿದ್ದು ಆಂಧ್ರ ಪ್ರದೇಶವನ್ನಾಳುತ್ತಿರುವ ಕಾಂಗ್ರೆಸ್ಸಿನಲ್ಲಿಯ ಸಂಜೀವ ರೆಡ್ಡಿಯವರ ಗುಂಪಿನ ವಿರೋಧಿಗಳ ಗುಂಪಿಗೆ ಸೇರಿದವರೇ ಕೊಲೆ ಮಾಡಲ್ಪಟ್ಟಿದ್ದಾರೆಂದು ವರದಿಯಾಗಿದೆ. ರಾಯಲಸೀಮೆಯಲ್ಲೇ ಇವು ನಡೆದಿದ್ದು ಕೊಲೆ ಮಾಡಲ್ಪಟ್ಟ ಇವರು ಹಿಂದಿನ ಕೃಷಿಕ ಲೋಕ ಪಾರ್ಟಿಗೆ (ಆ ಮೇಲೆ ಇದು ಕಾಂಗ್ರೆಸ್ಸಿನಲ್ಲಿ ವಿಲೀನವಾಯಿತು.) ಸಂಬಂಧಿಸಿದವರಾಗಿದ್ದರು.

ಮಾಜೀ ಎಂ.ಎಲ್.ಎ. ಶ್ರೀ ವೆಂಕಟಾಚಿಟ್ಟಿ ಅವರು ಇತ್ತೀಚೆಗೆ ಮತ್ತಿಬ್ಬರು ಗೂಂಡಾಗಳಿಂದ ತೀವ್ರ ಗಾಯಗಳಿಗೊಳಗಾದರೂ ಯಾವ ವಿಚಾರಣೆಯೂ ನಡೆಯಲಿಲ್ಲ. ಕಾರಣವೆಂದರೆ ಆಳುವವರ ಹಸ್ತಕ್ಷೇಪ!

ಇವುಗಳನ್ನೆಲ್ಲ ರಾಜಕೀಯ ಕೊಲೆಗಳೆಂದು ಹೇಗೆ ತಾನೆ ಯಾರು ತಾನೆ ಹೇಳಿಯಾರು ? ಹೇಳಿದರೆ ಕಾಂಗ್ರೆಸ್ ಕಾರ್ಯದರ್ಶಿ ಸಾದಿಕ್ ಅಲೀ ಸುಮ್ಮನಿದ್ದಾರೆಯೇ ? ಅವರೇ ಉತ್ತರಿಸುತ್ತಾರೆ: "ಇವೆಲ್ಲ ಕಾಂಗ್ರೆಸ್ ಒಳಗಡೆಯಿರುವ ಮನೆಯ ಜಗಳಗಳು."

—ಪ್ರಶ್ನಾರ್ಥಿ

ನ್ಯಾಯ ದರದ ಅಕ್ಕಿಯಂಗಡಿ- ಜತ್ತಿಯವರ ಪರಿಹಾಸ್ಯ

ಇತ್ತೀಚೆಗೆ ಮುಖ್ಯ ಮಂತ್ರಿ ಶ್ರೀ ಜತ್ತಿಯವರು ಒಂದು ಕಡೆ ಮಾತನಾಡುತ್ತಾ ಪ್ರಾಂತದಲ್ಲಿ ಆಹಾರದ ಪರಿಸ್ಥಿತಿ ಉತ್ತಮವಾಗಿದೆಯೆಂದೂ, ಇತ್ತೀಚೆಗೆ ನಾಡಿನಾದ್ಯಂತ 60 ಅಗ್ಗದರದ ಅಕ್ಕಿಯಂಗಡಿಗಳನ್ನು ತೆರೆದುದರಿಂದ ಪ್ರಾಂತದಲ್ಲಿ ಅಕ್ಕಿಯ ಬೆಲೆ ಏರುವುದನ್ನು ತಡೆಗಟ್ಟಲು ಸಾಧ್ಯವಾಗಿದೆಯೆಂದೂ ಕೊಟ್ಟ ಹೇಳಿಕೆ ಜಿಲ್ಲೆಯಲ್ಲಿ ಅಪಹಾಸ್ಯಕ್ಕೊಳಗಾಗಿದೆ. ಎರಡು ಕೋಟಿ ಜನಸಂಖ್ಯೆ ಇರುವ ನಾಡಿನಲ್ಲಿ 60 ನ್ಯಾಯದರದ ಅಕ್ಕಿಯಂಗಡಿಗಳನ್ನು ತೆರೆದ ಮಾತ್ರಕ್ಕೆ ಅದು ಪ್ರಾಂತದ ಅಗತ್ಯತೆಯನ್ನು ಪೂರೈಸುತ್ತದೆಯೆ? ಎಂಬುದೊಂದು ಪ್ರಶ್ನೆಯಾದರೆ, ಕೇವಲ 60 ಅಂಗಡಿಗಳಿಂದ ಈ ಅಕ್ಕಿಯ ಬೆಲೆಯೇರಿಕೆಯನ್ನು ತಡೆಗಟ್ಟಬಹುದೆ? ಎಂಬುದು ಇನ್ನೊಂದು ಪ್ರಶ್ನೆಯಾಗಿದೆ. ಕಾಂಗ್ರೆಸ್ ಪತ್ರಿಕೆಯಾದ ಮಂಗಳೂರಿನ 'ನವಭಾರತ' ದೈನಿಕವೇ ಈ ಹೇಳಿಕೆಯನ್ನು ತನ್ನ ಸಂಪಾದಕೀಯವೊಂದರಲ್ಲಿ ಪರಿಹಾಸ್ಯ ಮಾಡಿದೆ.

ಈ ನ್ಯಾಯದರದ ಅಕ್ಕಿಯಂಗಡಿಗಳ ನಿಜ ಸಂಗತಿಗಳೇನು ತಿಳಿಯೋಣ. ಜಿಲ್ಲೆಯ ಜನರ, ಮುಖ್ಯವಾಗಿ ಕಮ್ಯೂನಿಸ್ಟ್ ಪಾರ್ಟಿ, ರೈತ ಸಂಘ, ಟ್ರೇಡ್ ಯೂನಿಯನ್‌ಗಳು ಜಿಲ್ಲೆಯಾದ್ಯಂತ ನ್ಯಾಯದರದ ಅಕ್ಕಿಯಂಗಡಿಗಳನ್ನು ತೆರೆಯಬೇಕೆಂದು ಚಳುವಳಿ ನಡೆಸಿದ್ದವು. ಇದರ ಪರಿಣಾಮವಾಗಿ ಸರಕಾರ 'ನಾಮಕಾವಾಸ್ತೆ' ಎಂಬಂತೆ ಮಂಗಳೂರಿನಲ್ಲಿ ಐದು ನ್ಯಾಯದರದ ಅಕ್ಕಿಯಂಗಡಿಗಳನ್ನು ತೆರೆಯಿತು. ಇದರಲ್ಲಿ ಸರಿಯಾಗಿ ನಡೆಯುತ್ತಿರುವ ಅಂಗಡಿಗಳು ಮೂರು ಮಾತ್ರ.

ಈ ಮೂರು ಅಂಗಡಿಗಳಲ್ಲೂ ಸಿಗುತ್ತಿರುವ ಅಕ್ಕಿಯೆಂದರೆ ಮನುಷ್ಯನಾದವನಿಗೆ ಉಣ್ಣಲು ಅಸಾಧ್ಯವಾದುದು. ಜನರು ಈ ಹಾಳು ಅಕ್ಕಿಯನ್ನು ಪಡೆಯುವ ಬದಲು ಒಂದೆರಡಾಣೆ ಹೆಚ್ಚು ಕೊಟ್ಟು ಬೇರೆ ಮಾರ್ಕೆಟ್ಟಿನಿಂದ ಅಕ್ಕಿ ಪಡೆಯುತ್ತಾರೆ. ಈ ಐದು ನ್ಯಾಯದರದ ಅಂಗಡಿಗಳಲ್ಲಿ ಒಟ್ಟು ದಿನಕ್ಕೆ 50 ಮೂಟೆಗಿಂತ ಹೆಚ್ಚು ಅಕ್ಕಿ ಖರ್ಚಾಗುತ್ತಿಲ್ಲವೆಂದು ತಿಳಿದು ಬರುತ್ತದೆ. ಸುಮಾರು 1½ ಲಕ್ಷ ಜನರು ವಾಸಿಸುವ ನಗರದಲ್ಲಿ ಸರಕಾರ 50 ಮೂಟೆ ಅಕ್ಕಿಯನ್ನು ಮಾರಿದರೆ ಅಕ್ಕಿ ಬೆಲೆ ಏರಿಕೆಯನ್ನು ಹೇಗೆ ತಡೆಗಟ್ಟುವುದೋ ಯಾರಿಗೂ ಅರ್ಥವಾಗದ ಪ್ರಶ್ನೆ!

ತಮ್ಮ ಚಳವಳದ ಫಲವಾಗಿ ಐದು ನ್ಯಾಯದರದ ಅಂಗಡಿಗಳು ತೆರೆಯಲಾದುದು ಸ್ವಾಗತಾರ್ಹವಾದರೂ ಇನ್ನೂ ಇಂತಹ ಅಂಗಡಿಗಳನ್ನು ಅಗತ್ಯ ಇರುವಲ್ಲೆಲ್ಲ ತೆರೆದು, ಉತ್ತಮತರದ ಅಕ್ಕಿಯನ್ನು ಒದಗಿಸಬೇಕೆನ್ನುವ ಒತ್ತಾಯವನ್ನು ಜಿಲ್ಲೆಯ ಜನ ಸಂಘಟಿತ ರೀತಿಯಿಂದ ತರುತ್ತಿದ್ದಾರೆ. ಕಮ್ಯೂನಿಸ್ಟ್ ಪಾರ್ಟಿಯ ವಿವಿಧ ಶಾಖೆಗಳು ಈ ವಿಷಯದಲ್ಲಿ ಠರಾವುಗಳನ್ನು ಮಾಡಿವೆ. ಜಿಲ್ಲಾಧಿಕಾರಿಗಳಿಗೆ ಮನವಿಗಳನ್ನು ಕೊಟ್ಟಿವೆ. ಸರಕಾರ ವಿಳಂಬ ಮಾಡದೆ ಯೋಗ್ಯ ಕಾರ್ಯಕ್ರಮವನ್ನು ಶೀಘ್ರವಾಗಿ ಕೈಕೊಳ್ಳಬೇಕು. ಜಿಲ್ಲೆಯ ಒಂದು ವಿಭಾಗದ ಕಾಂಗ್ರೆಸ್ಸಿಗರಲ್ಲಿ ನಡೆಯುತ್ತಿರುವ ಚಳವಳಕ್ಕೆ ಈ ಸಂದರ್ಶ ಪ್ರೋತ್ಸಾಹಕವಾಗಬಹುದು. ಅದೇ ವೇಳೆ ಜತ್ತಿ ಮುಂದಾಳುತ್ವಕ್ಕೆ ಓಟು ಕೊಟ್ಟ ಎಂ.ಎಲ್.ಎ. ಗಳನ್ನು ಸಮಜಾಯಿಸಿ ತನ್ನ ಬುಟ್ಟಿಗೆ ಹಾಕಿಕೊಳ್ಳಲು ಯತ್ನಿಸಲೂಬಹುದು.

ಮಂಗಳೂರು

ಕೇರಳ ಸರಕಾರಕ್ಕೆ ಬೆಂಬಲ ನೀಡಲು ಅಲ್ಲಲ್ಲಿ ಸಭೆ ಮೆರವಣಿಗೆಗಳು

ಇಂದು ಕೇರಳದ ಪರಿಸ್ಥಿತಿಯ ಬಗ್ಗೆ ನಡೆಯುತ್ತಿರುವ ಅಪಪ್ರಚಾರಗಳಿಗೆ—ಮುಖ್ಯವಾಗಿ ಕಾಸರಗೋಡು ತಾಲ್ಲೂಕಿನ ಹತಾಶ ರಾಜಕಾರಣಿಗಳಿಗೆ–ಮಂಗಳೂರು ನಗರವೊಂದು ಕೇಂದ್ರ. ಒಂದೆರಡು ಪತ್ರಿಕೆಗಳ ಹೊರತು (ಜಿಲ್ಲೆಯಲ್ಲಿ 2 ದೈನಿಕಗಳೂ 10 ಸಾಪ್ತಾಹಿಕಗಳು ಇವೆ) ಉಳಿದ ಪತ್ರಿಕೆಗಳೆಲ್ಲ ಕೇರಳದ ಕಮ್ಯೂನಿಸ್ಟ್ ಸರಕಾರವನ್ನು ಟೀಕಿಸುವುದೆ ತಮ್ಮ ಗುರಿಯಾಗಿಟ್ಟುಕೊಂಡಿವೆ. ಕುಪ್ರಸಿದ್ಧ ದೈನಿಕ ನವಭಾರತವಂತೂ ಉದ್ದೇಶ ಪೂರ್ವಕವಾಗಿ ಕೇರಳ ಸರಕಾರವನ್ನು ಪ್ರತಿದಿನವೂ ಟೀಕಿಸುವ, ಪರಿಹಾಸವಾಡುವ ಸಂಪಾದಕೀಯಗಳನ್ನೋ, ಸುದ್ದಿಗಳನ್ನೋ ವರದಿಗಳನ್ನೋ ಪ್ರಕಟಿಸುತ್ತದೆ. ಹೀಗಿರುವಾಗ ಕೇರಳದ ನಿಜ ಪರಿಸ್ಥಿತಿಯನ್ನು ಜನರಿಗೆ ತಿಳಿಯಪಡಿಸಿ, ಅಲ್ಲಿನ ಪ್ರತಿಪಕ್ಷಗಳ ವಿಧ್ವಂಸಕ ಕಾರ್ಯಗಳನ್ನು ಬಯಲಿಗೆಳೆದು, ಕೇರಳ ಸರಕಾರಕ್ಕೇ ಬೆಂಬಲ ನೀಡುವುದಕ್ಕೂ, ಆ ಸರಕಾರ ಸಾಧಿಸಿದ ಕಾರ್ಯಗಳನ್ನು ವಿವರಿಸಲಿಕ್ಕೂ ಅಲ್ಲಲ್ಲಿ ಸಭೆಗಳನ್ನು ಜರಗಿಸಬೇಕೆಂದು ಕಮ್ಯೂನಿಸ್ಟ್ ಪಾರ್ಟಿಯ ಮಂಗಳೂರು ಸಮಿತಿ ನಿರ್ಧರಿಸಿದೆ.

ಜಿಲ್ಲಾ ಸಮಿತಿ ಮತ್ತು ಜಿಲ್ಲಾ ರೈತ ಸಂಘಗಳ ಜಂಟಿ ಆಶ್ರಯದಲ್ಲಿ ಪೈವಳಿಕೆ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಲು ಮತ್ತು ಕೇರಳ ಸರಕಾರಕ್ಕೆ ಬೆಂಬಲನೀಡಲು ಕಳೆದ 14ರಂದು ಕೇಂದ್ರ ಮೈದಾನಿನಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ಎ. ಶಾಂತರಾಮ ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು.

ಕೇರಳ ವಿಧಾನ ಸಭೆಯ ಸದಸ್ಯರೂ ಸುಪ್ರಸಿದ್ಧ ಕಮ್ಯೂನಿಸ್ಟ್ ನಾಯಕರೂ ಆದ ಶ್ರೀ ಕೆ. ಪಿ. ಆರ್. ಗೋಪಾಲನ್ ಇವರು ಈ ಸಭೆಯ ಮುಖ್ಯ ಭಾಷಣಕಾರರಾಗಿದ್ದರು. ಅವರು ತಮ್ಮ ಭಾಷಣದಲ್ಲಿ ಕೇರಳದಲ್ಲಿ ಅರಕ್ಷಿತಾವಸ್ಥೆ ಇದೆಯೆಂಬ ಕೂಗಿನ ನಿಜ ಅರ್ಥವನ್ನು ಸ್ವಾರಸ್ಯವಾಗಿ ಬಯಲಿಗೆಳೆದರು. 1848ರಲ್ಲಿ ಕಾರ್ಲ್ ಮಾರ್ಕ್ಸ್‌ರ ಕಮ್ಯೂನಿಸ್ಟ್ ಘೋಷಣೆಯನ್ನು ಬರೆದು ಪ್ರಕಟಿಸಿದಂದಿನಿಂದ "ಅರಕ್ಷಿತಾವಸ್ಥೆಯ ಕೂಗು" ಉಂಟಾಗಿದೆಯೆಂದೂ, ಇದರಲ್ಲಿ ಕೇರಳದಲ್ಲೀಗ ಆರಂಭವಾಗಿದೆ ಅಷ್ಟೇ ಎಂದೂ ಅವರು ಹೇಳಿದರು. ಸತ್ಯ ಅಹಿಂಸೆಗಳನ್ನು ಘೋಷಿಸಿದ್ದ ಕಾಂಗ್ರೆಸ್ ಇಂದು ಆ ತತ್ವಗಳನ್ನು ಕೈಬಿಟ್ಟಿದೆಯೆಂದೂ, ಸತ್ಯ ಅಹಿಂಸೆಯ ಆದರ್ಶವನ್ನು ಕಮ್ಯೂನಿಸ್ಟ್ ಪಾರ್ಟಿ ತನ್ನ ಕೈಗೆತ್ತಿಗೊಂಡಿದೆಯೆಂದೂ ಅವರು ನುಡಿದರು. ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರ ಅನುಸರಿಸುತ್ತಿರುವ ನೀತಿ, ಪ್ರತಿಪಕ್ಷಗಳ ವರ್ತನೆ ಇವನ್ನು ವಿವರಿಸಿ "ಕೇಂದ್ರ ಸರಕಾರ ಕೇರಳದಲ್ಲಿ ಹಸ್ತಕ್ಷೇಪ ಮಾಡಿದ್ದೇ ಆದರೆ ಮುಂಬರುವ ಚುನಾವಣೆಯಲ್ಲಿ, ಕಮ್ಯೂನಿಸ್ಟ್ ಪಾರ್ಟಿ ಈಗಿಂತಲೂ ಹೆಚ್ಚಿಗೆ ಬಲಯುತವಾಗಿ ಆರಿಸಿ ಬರುವುದೆಂದೂ ಅವರು ವಿಶ್ವಾಸ ವ್ಯಕ್ತಪಡಿಸಿದರು.

ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಮುಷ್ಕರ

(ಮೊದಲನೇ ಪುಟದಿಂದ)

ರೋಧಿಯೆಂಬುದು ಎಲ್ಲರಿಗೂ ಚೆನ್ನಾಗಿ ತಿಳಿದಿದೆ. ಇಷ್ಟೆಲ್ಲ ದುಷ್ಪ್ರಚಾರಗಳು ಒತ್ತಾಯಗಳೂ ಇದ್ದರೂ ಸಹ ಕಾರ್ಮಿಕರು ಐಕ್ಯತೆಯಿಂದಿದ್ದು ಮುಷ್ಕರವನ್ನು ಶಾಂತರೀತಿಯಿಂದ ಮುಂದುವರೆಸುತ್ತಿರುವುದು ಗಮನಾರ್ಹವಾಗಿದೆ.

ಸರಕಾರವು ಮುಷ್ಕರ ನಡೆದ ನಂತರವೂ ಸಹ ತಕ್ಕ ಕ್ರಮ ತೆಗೆದುಕೊಳ್ಳದೆ ಹಿಂದೆಮುಂದೆ ನೋಡುತ್ತಿದೆ. ಸರಕಾರದ ಈ ಅನಾದರಣೆಯ ನೀತಿ ಖಂಡನೀಯವಾಗಿದೆ. ಮುಷ್ಕರ ಆರಂಭವಾಗಿ ಸುಮಾರು ೨೦ ದಿನಗಳಾಗುತ್ತಾ ಬಂದರೂ ಸಹ ಸರಕಾರವು ಕ್ರಮ ತೆಗೆದುಕೊಂಡಿಲ್ಲ. ಬದಲು ದಬ್ಬಾಳಿಕೆ ನಡೆಸಲು ಯತ್ನಿಸುತ್ತಿದೆ.

ಸರಕಾರದ ಈ ಅನಾದರಣೆ ನೀತಿಯನ್ನೂ ಮ್ಯಾನೇಜ್‌ಮೆಂಟಿನ ಭಂಡತನವನ್ನೂ ಪ್ರತಿಭಟಿಸಿ, ಜನತೆಯ ಗಮನವನ್ನು ಸೆಳೆಯಲು ಸಂಘದ ಕಾರ್ಯದರ್ಶಿ ಶ್ರೀ ಪಿ. ನಾರಾಯಣ್‌ರವರು ಉಪವಾಸ ಮುಷ್ಕರ ಹೂಡಲು ನಿರ್ಧರಿಸಿದ್ದಾರೆಂದು ತಿಳಿದುಬಂದಿದೆ. ತಮ್ಮ ನ್ಯಾಯವಾದ ಬೇಡಿಕೆಗಳಿಗಾಗಿ, ಸಂಘದ ಮಾನ್ಯತೆಗಾಗಿ ಹೋರಾಡುತ್ತಿರುವ ಹಟ್ಟಿ ಚಿನ್ನದ ಗಣಿ ಕಾರ್ಮಿಕರಿಗೆ ಪ್ರಾಂತದ ಕಾರ್ಮಿಕರ ಸಂಪೂರ್ಣ ಬೆಂಬಲವಿದೆ. ಸರಕಾರ ಕೂಡಲೇ ಪ್ರವೇಶಿಸಿ, ವಿವಾದವನ್ನು ಇತ್ಯರ್ಥಗೊಳಿಸಬೇಕೆಂದು ಒತ್ತಾಯಪಡಿಸುತ್ತೇವೆ. ಕಾರ್ಮಿಕರು ಈ ವರೆಗೆ ಪ್ರದರ್ಶಿಸಿರುವ ದೃಢವಾದ ಐಕ್ಯತೆಯನ್ನು ಕಾಪಾಡಿಕೊಂಡು ಮುಷ್ಕರ ಮುರುಕರ ಯತ್ನವನ್ನು ಭಗ್ನಗೊಳಿಸುವುದರಲ್ಲಿ ಸಂಶಯವಿಲ್ಲ.

ಕಾಂ॥ ನಂಬೂದ್ರಿಪಾದ್ ಮಂಗಳೂರಿಗೆ

ಕಳೆದ ತಾ. 15, 16 ಈ ಎರಡು ದಿನಗಳಲ್ಲಿ ಕೇರಳದ ಮುಖ್ಯ ಮಂತ್ರಿ ಶ್ರೀ ನಂಬೂದ್ರಿಪಾದ್‌ರವರು ಕಾಸರಗೋಡು ತಾಲ್ಲೂಕಿಗೆ ಭೇಟಿ ಇತ್ತು ಹಲವು ಸಮಾರಂಭ, ಸಭೆಗಳಲ್ಲಿ ಭಾಗವಹಿಸಿದರು. ಮಂಗಲ್ಪಾಡಿಯಲ್ಲಿ ದ.ಕ. ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿಯ ಪರವಾಗಿ ಅವರನ್ನು ಮಂಗಳೂರಿಗೆ ಆಮಂತ್ರಿಸಿದಾಗ ಇದೇ ತಾ. 24, 25 ಈ ಎರಡು ದಿನಗಳಲ್ಲಿ ಮಂಗಳೂರಿಗೆ ಆಗಮಿಸಲಿದ್ದಾರೆ.

ವೀರಣ್ಣ ಗೌಡರು ಮಂಗಳೂರಿಗೆ

ಮೈಸೂರು ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ ವೀರಣ್ಣಗೌಡರು ದ. ಕ. ಜಿಲ್ಲೆಯಲ್ಲಿ ನಾಲ್ಕು ದಿನಗಳ ಸಂಚಾರ ಕಾರ್ಯಕ್ರಮವನ್ನಿಟ್ಟುಕೊಂಡುದು ಇಲ್ಲಿನ ಕಾಂಗ್ರೆಸ್ ವರ್ತುಲಗಳಲ್ಲಿ ಹೆಚ್ಚಿನ ಗಲಿಬಿಲಿಗೆ ಕಾರಣವಾಗಿದೆ. ಕಾಂಗ್ರೆಸ್ ಸಂಸ್ಥೆಯನ್ನು 'ಬಲಪಡಿಸುವ' ಉದ್ದೇಶವೆಂದು ಈ ಸಂಚಾರಕ್ಕೆ ಅರ್ಥ ಕಟ್ಟಲಾಗಿದ್ದರೂ, ಈ ಸಂಚಾರಕ್ಕೂ ಜತ್ತಿ ಮಂತ್ರಿಮಂಡಲದ ಭವಿಷ್ಯಕ್ಕೂ ಹೆಚ್ಚಿನ ಸಂಬಂಧವಿದೆಯೆಂದು ಹೇಳಲಾಗುತ್ತಿದೆ.

ನಿಜಲಿಂಗಪ್ಪ ಮಂತ್ರಿಮಂಡಲದ ವಿರುದ್ಧ ದಂಗೆಯ ಧ್ವಜ ಎತ್ತಿದವರಲ್ಲಿ ಒಬ್ಬರಾದ ಶ್ರೀ ಕೆ.ಕೆ. ಶೆಟ್ಟರು ದ.ಕ. ಜಿಲ್ಲಾ ಕಾಂಗ್ರೆಸಿನ ಅಧ್ಯಕ್ಷರಾಗಿದ್ದಾರೆ. ನಿಜಲಿಂಗಪ್ಪನವರ ವಿರುದ್ಧ ಜಿಲ್ಲೆಯ ಬಹುಮತ ಎಂ.ಎಲ್.ಎ. ಗಳು ಓಟು ಕೊಟ್ಟಿದ್ದರೂ ಅದು ಶ್ರೀ ಶೆಟ್ಟರ ಪ್ರಭಾವದಿಂದ ಎಂದು ಹೇಳಬರುವುದಿಲ್ಲ. ಯಾಕೆಂದರೆ ಜಿಲ್ಲೆಯ ಕಾಂಗ್ರೆಸ್ ವೃತ್ತದಲ್ಲಿ ಶ್ರೀ ಶೆಟ್ಟರಿಗೆ ಇದ್ದ ಸ್ಥಾನ ಸರ್ವರಿಗೂ ತಿಳಿದಿದೆ. ಶ್ರೀ ಶೆಟ್ಟರು ಜಿಲ್ಲಾ ಕಾಂಗ್ರೆಸಿನ ಕಾರ್ಯದರ್ಶಿಯಾಗಿದ್ದಾಗ ಸಾವಿರಾರು ರೂ. ಹಣದ ಲೆಕ್ಕಪತ್ರಗಳನ್ನು ಪರಿಶೋಧಿಸಲಾಗಿಲ್ಲ ಎಂಬದೂರು ಕಳೆದ ಚುನಾವಣಾ ಸಮಯದಲ್ಲಿ ಬಯಲಾಗಿತ್ತು. ಇವರನ್ನು ಕಾಂಗ್ರೆಸಿನಿಂದಲೂ ಒಮ್ಮೆ ಅನಾಮತುಗೊಳಿಸಲಾಗಿತ್ತು. ಆದರೆ ಹಿಂದಿನ ಕಾಂಗ್ರೆಸ್ ಅಧ್ಯಕ್ಷ ಡಾ॥ ಯು. ಪಿ. ಮಲ್ಯರ ರಾಜಿನಾಮೆ ಕೊಟ್ಟಾಗ 'ಅಳಿದ ಊರಿಗೆ ಉಳಿದವನೆ ಗೌಡ' ಎಂಬಂತೆ ಇವರು ಕಾಂಗ್ರೆಸಿನ ಜಿಲ್ಲಾ ಅಧ್ಯಕ್ಷರಾದರು.

ನಿಜಲಿಂಗಪ್ಪ ಮಂತ್ರಿಮಂಡಲದ ವಿರುದ್ಧ ಇವರು ದಂಗೆಯೆದ್ದಾಗ ಜಿಲ್ಲಾ ಕಾಂಗ್ರೆಸ್ ವೃತ್ತದೊಳಗೇ ಅತೃಪ್ತಿ ಹೊಗೆಯಾಡಿತ್ತು. ಕಾಂಗ್ರೆಸಿನ ಸಭೆಯೊಳಗೆ ಇವರ ಈ ನೀತಿ ಕಟುವಾದ ಟೀಕೆಗೊಳಗಾಗಿತ್ತು. ಉಡುಪಿಯ ಶ್ರೀ ಟಿ.ಎ.ಪೈ ಈಗಿನ ಕೆ.ಪಿ.ಸಿ.ಸಿ. ಸದಸ್ಯ ಇವರು ಬಹಿರಂಗವಾಗಿ ಈ ನೀತಿಯನ್ನು ಟೀಕಿಸಿದರು.

ಈ ಹಿನ್ನೆಲೆಯಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಸಂದರ್ಶನಕ್ಕೆ ಮಹತ್ವವಿಲ್ಲದಿಲ್ಲ. ಅದೇವೇಳೆ ತಾ. 20ರ 'ಫ್ರೀ ಪ್ರೆಸ್ ಜರ್ನಲ್'ನಲ್ಲಿ ಜತ್ತಿ ಮಂತ್ರಿಮಂಡಲದ ಭವಿಷ್ಯವೂ ಅಪಾಯದಲ್ಲಿದೆಯೆಂಬ ವರದಿ ಈ 'ಮಹತ್ವ'ಕ್ಕೇ ಇನ್ನಷ್ಟು ಪುಷ್ಟಿಕೊಟ್ಟಿದೆ. ಕೆ. ಕೆ. ಶೆಟ್ಟರನ್ನ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪದವಿಯಿಂದ ತೆಗೆದು ಹಾಕಲು

REG. No. M 6867

Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore—2
phone: 3810